ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

# ಸ್ವಾಭಿಮಾನಿ ಸಹಕಾರಿ

Swabhimani Sahakari

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

Volume - 12
Issue - 3
Pages - 24
rs. 12
March - 2015

ಅತಿ ಸಿರಿವಂತರಿಗೆ ಶೇ 2ರಷ್ಟು ಸರ್‌ಚಾರ್ಜ್

ಕೃಷಿ ಸಾಲ ರೂ. 8.50 ಲಕ್ಷ ಕೋಟಿಗೆ ಏರಿಕೆ

ರಕ್ಷಣಾ ಕ್ಷೇತ್ರಕ್ಕೆ ಶೇ 10ರಷ್ಟು ಅಧಿಕ ಹಣ

ಸ್ವಚ್ಛ ಇಂಧನ ಉತ್ಪಾದನಗೆ ಆದ್ಯತೆ

ಕುಟುಂಬದಲ್ಲಿ ಕನಿಷ್ಠ ಒಬ್ಬರಿಗಾದರೂ ಉದ್ಯೋಗ

20 ಸಾವಿರ ಹಳ್ಳಿಗಳಿಗೆ ವಿದ್ಯುತ್




ಪರೋಕ್ಷ ತೆರಿಗೆಗೆ ಆದ್ಯತೆ

ಸ್ವಚ್ಛಭಾರತ ಯೋಜನೆ : 6 ಕೋಟಿ ಶೌಚಾಲಯ ನಿರ್ಮಾಣ ಗುರಿ

ಕಪ್ಪುಹಣ ಬಚ್ಚಿಟ್ಟರೆ ಜೈಲು

ಸೇವಾ ತೆರಿಗೆ ಹೆಚ್ಚಳ

ಗ್ರಾಮೀಣಾಭಿವೃದ್ಧಿಗೆ 25000 ಕೋಟಿ ಅಭಿವೃದ್ಧಿ ನಿಧಿ

ಕರ್ನಾಟಕಕ್ಕೆ ಐಐಟಿ ಹಾಗೂ ಹಂಪಿ ಅಭಿವೃದ್ಧಿ


ಯುಗಾದಿ


ಹೋಳಿ


ಮಹಿಳಾ ದಿನಾಚರಣೆ


ಶ್ರೀರಾಮ ನವಮಿ

ಸೌಹಾರ್ದ ಸಹಕಾರಿಗಳ ಸಂಖ್ಯೆ : 3121 । ಶುಭಾಶಯಗಳು । 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 768



“ಇಲ್ಲಿ ಅವರದ್ದೇ ಬಂಡವಾಳ, ಅವರದ್ದೇ ಠೇವಣಿ, ಅವರೇ ಸಾಲ ತೆಗೆದುಕೊಳ್ಳುವವರು, ಅವರಿಗಾಗಿಯೇ ವಿವಿಧ ಯೋಜನೆಗಳು, ವಿವಿಧ ಸೌಲಭ್ಯಗಳು ಹಾಗೂ ಲಾಭ ಸೇರಬೇಕಾದುದು ಅವರಿಗೆ, ಅವರೇ ಮಾಲೀಕರು.”

# 2014-15ನೇ ಆರ್ಥಿಕ ವರ್ಷ ಮುಕ್ತಾಯ

ಆತ್ಮೀಯ ಸಹಕಾರಿ ಬಂಧುಗಳಿಗೆ ಬಣ್ಣದ ಹಬ್ಬ ಹೋಳಿ, ಅಂತರ ರಾಷ್ಟ್ರೀಯ ಮಹಿಳಾ ದಿನ, ಯುಗಾದಿ ಹಾಗೂ ಶ್ರೀರಾಮ ನವಮಿಯ ಶುಭಾಶಯಗಳು. ಜಯ ನಾಮ ಸಂವತ್ಸರವನ್ನು ಕಳೆದು ಈಗ ಮನ್ಮಥನಾಮ ಸಂವತ್ಸರಕ್ಕೆ ಕಾಲಿರಿಸುತ್ತಿದ್ದೇವೆ. ಈ ಸಂವತ್ಸರದಲ್ಲಿ ರಾಜ್ಯದ ಸಹಕಾರಿ ಕ್ಷೇತ್ರದಲ್ಲಿ ವಿಶೇಷವಾಗಿ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲರಿಗೂ ಶುಭಕೋರುತ್ತೇನೆ. ತಮಗೆ ಹೆಚ್ಚಿನ ಶ್ರೇಯಸ್ಸು ಬರಲಿ. ಸುಖ ಶಾಂತಿ ನೆಮ್ಮದಿ ಹಾಗೂ ಸಂತೋಷದ ಜೀವನ ನಿಮ್ಮದಾಗಲಿ ಎಂದು ಹಾರೈಸುತ್ತೇನೆ.

ಮಾರ್ಚ್ 31 ಎಲ್ಲ ಸಹಕಾರಿ ಸಂಸ್ಥೆಗಳು ತಮ್ಮ ವಾರ್ಷಿಕ ಲೆಕ್ಕಪತ್ರಗಳನ್ನು ಅಂತಿಮಗೊಳಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿರುವುದು ಸಹಜವಾದುದು. ಸಹಕಾರಿಗಳು ಸ್ವೀಕರಿಸಿದ ಠೇವಣಿ, ನೀಡಿರುವ ಸಾಲಗಳು, ಸಾಲ ವಸೂಲಾತಿಗಳು, ತಮ್ಮ ಕಾರ್ಯಯೋಜನೆಗಳ ಅನುಷ್ಠಾನಗಳಿಗಾಗಿ ಮಾಡಿರುವ ವೆಚ್ಚಗಳು ಹಾಗೂ ದಿನನಿತ್ಯದ ಆಡಳಿತ ವೆಚ್ಚಗಳು ಇತ್ಯಾದಿಗಳನ್ನೆಲ್ಲ ಕ್ರೋಢೀಕರಿಸಿ ಜಮಾ-ಖರ್ಚು ತಯಾರಿಸಿದ ನಂತರ ಲಾಭ-ನಷ್ಟ ಖಾತೆ, ಆಸ್ತಿ ಜವಾಬ್ದಾರಿ ತಃಖ್ತೆಗಳನ್ನು ತಯಾರಿಸುವುದು ಮಹತ್ವದ ಕಾರ್ಯವಾಗಿದೆ.

ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳು ಪಾರದರ್ಶಕ ಹಾಗೂ ವೃತ್ತಿಪರ ಆಡಳಿತದಿಂದ ಕೂಡಿರುತ್ತದೆ ಎಂಬುದಾಗಿ ಸಾರ್ವಜನಿಕರಲ್ಲಿ ಹಾಗೂ ಸರಕಾರಗಳಲ್ಲಿ ಮನದಟ್ಟಾಗಿದೆ. ಈ ಗೌರವವನ್ನು ಉಳಿಸಿಕೊಂಡು ಹೋಗುವುದು ಸೌಹಾರ್ದ ಸಹಕಾರಿಗಳ ಕರ್ತವ್ಯವಾಗಿದೆ ಎಂದು ಆಶಿಸುತ್ತೇನೆ.

ಸ್ನೇಹಿತರೇ ಸಹಕಾರಿ ಸಂಸ್ಥೆಗಳಲ್ಲಿ ಸದಸ್ಯರು ಅಂದರೆ ಸಾರ್ವಜನಿಕರು ತಮ್ಮ ಅನುಕೂಲಕ್ಕಾಗಿ ಕಟ್ಟಿಕೊಂಡಿರುವ ಸಂಸ್ಥೆ. ಇಲ್ಲಿ ಅವರದ್ದೇ ಬಂಡವಾಳ, ಅವರದ್ದೇ ಠೇವಣಿ, ಅವರೇ ಸಾಲ ತೆಗೆದುಕೊಳ್ಳುವವರು, ಅವರಿಗಾಗಿಯೇ ವಿವಿಧ ಯೋಜನೆಗಳು, ವಿವಿಧ ಸೌಲಭ್ಯಗಳು ಹಾಗೂ ಲಾಭ ಸೇರಬೇಕಾದುದು ಅವರಿಗೆ, ಅವರೇ ಮಾಲೀಕರು. ಅವರು ವಹಿಸಿಕೊಟ್ಟ ಜವಾಬ್ದಾರಿಯನ್ನು ಆಡಳಿತ ಮಂಡಲಿ ನಿರ್ವಹಿಸುತ್ತದೆ. ಆಡಳಿತ ಮಂಡಲಿಯವರ ನಿರ್ದೇಶನದಂತೆ ಸಿಬ್ಬಂದಿಯವರು ಕಾರ್ಯನಿರ್ವಹಿಸುತ್ತಾರೆ. ಹೀಗಿರುವಾಗ ಸದಸ್ಯರಿಗೆ ಹೆಚ್ಚಿನ ಅನುಕೂಲತೆಗಳು ದೊರಕಬೇಕಾದರೆ ಸಹಕಾರಿಯ ಕಾರ್ಯಚಟುವಟಿಕೆಗಳು ನಿಯಮಿತವಾಗಿ ನಿಯಮಬದ್ಧವಾಗಿ ಕಾರ್ಯನಿರ್ವಹಿಸುವಂತೆ ಆಡಳಿತ ಮಂಡಲಿಯವರು ಹಾಗೂ ಸಿಬ್ಬಂದಿಯವರು ಕಾಳಜಿ ವಹಿಸಿ ಕಾರ್ಯನಿರ್ವಹಿಸುವುದು ಅಗತ್ಯ.

ಆದ್ದರಿಂದ ಪ್ರತಿ ವರ್ಷ 31 ಮಾರ್ಚ್‌ರಂದು ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಲೆಕ್ಕಗಳನ್ನು ಅಂತಿಮಗೊಳಿಸಬೇಕು. ಬೇರೆಯವರ ಹಾಗೇ ಸಾಲ ವಸೂಲಿ ಪ್ರಮಾಣ ಇನ್ನೂ ಹೆಚ್ಚಾಗಲಿ, ಆದಾಯಗಳು ಇನ್ನೂ ಹೆಚ್ಚಲಿ ಅಂದರೆ ಲಾಭ ಇನ್ನೂ ಹೆಚ್ಚು ಬರುತ್ತದೆ ಎಂದು ಲೆಕ್ಕಪತ್ರಗಳನ್ನು ಅಂತಿಮಗೊಳಿಸದೇ ವಿಳಂಬ ಮಾಡುವುದು ಉತ್ತಮ ಪದ್ಧತಿಯಾಗುವುದಿಲ್ಲ. ವೃತ್ತಿಪರ ಹಾಗೂ ಪಾರದರ್ಶಕ ಆಡಳಿತವೆನಿಸುವುದಿಲ್ಲ. ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಈ ವಿಷಯದತ್ತ ಅಗತ್ಯ ಗಮನಹರಿಸಿ ಕಾರ್ಯನಿರ್ವಹಿಸಬೇಕೆಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆ.

▸▸ **ಗುರುನಾಥ ಜಾಂತಿಕರ,** ಅಧ್ಯಕ್ಷರು

## ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

**ಶ್ರೀ ಗುರುನಾಥ ಜಾಂತಿಕರ**
ಗೌರವ ಅಧ್ಯಕ್ಷರು

**ಶ್ರೀ ಹೆಚ್.ವಿ.ರಾಜೀವ**
ಗೌರವ ಉಪಾಧ್ಯಕ್ಷರು

**ಶ್ರೀ ಎಸ್.ಆರ್.ಸತೀಶಚಂದ್ರ**
ಗೌರವ ಸದಸ್ಯರು

**ಶ್ರೀ ಶರಣಗೌಡ ಜಿ. ಪಾಟೀಲ್**
ಸಂಪಾದಕರು

**ಶ್ರೀ ವಿ.ಜೆ.ಕಾರಕೂನ**
ಸಂಚಾಲಕರು

**ಶ್ರೀ ರಘುನಂದನ ಕೆ.**
ಸದಸ್ಯರು


## ಒಳ ಪುಟಗಳಲ್ಲಿ . . .


ಸಹಕಾರ ಸಂಸ್ಥೆಗಳಿಗೆ, ಶ್ರಮಿಸಿದ ಕಾರ್ಯಕರ್ತರಿಗೆ ಅಭಿನಂದನಾ ಸಭೆ ......... 4

ಸೌಹಾರ್ದ ಸಹಕಾರಿ ಬ್ಯಾಂಕುಗಳ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರುಗಳಿಗೆ ಆಡಳಿತ ಪರಿಣಿತಿ ತರಬೇತಿ ............................. 5

ತರಬೇತಿ ಅಭಿವೃದ್ಧಿಯ ವೇಗ ಹೆಚ್ಚಿಸುವುದರ ಜೊತೆಗೆ ಸಮಸ್ಯೆಗಳ ಪರಿಹಾರ ಚಿಂತನೆಗೆ ಆದ್ಯತೆ ನೀಡಬೇಕು – ಶ್ರೀ ಎಸ್.ಆರ್. ಲಕ್ಷ್ಮೀಕಾಂತರೆಡ್ಡಿ .....6

ಜಾಗೃತ ಯುವಶಕ್ತಿಯಿಂದ ಸದೃಢ ದೇಶ ನಿರ್ಮಾಣ ಸಾಧ್ಯ – ಶ್ರೀ ಎಸ್.ಎಸ್. ಪಾಟೀಲ್ ........................................................ 7

ವಿದ್ಯಾರ್ಥಿಗಳಲ್ಲಿ ಸಹಕಾರ ಜಾಗೃತಿ ಮೂಡಿಸುವ ಕಾರ್ಯ ಶ್ಲಾಘನೀಯ : ಶ್ರೀ ಅರುಣ ಶಹಾಪುರ ........................................................ 8,9

SiFiNವಾರ್ತೆ.....................................................................................10

HIGHLIGHTS OFTHE PROPOSED AMENDMENTS RELATING DIRECT TAXES APPLICABLE TO CO-OPERATIVES- BUDGET 2015...11,12,13,14

ಶಾಖೆಗಳ ಉದ್ಘಾಟನೆ.......................................................................15

ಸ್ವಚ್ಛತಾ ಸಪ್ತಾಹ ಆಚರಣೆ .........................................................16

ಬೆಲ್ಲದ–ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಆಡಳಿತ ಮಂಡಳಿಗೆ ಅವಿರೋಧ ಆಯ್ಕೆ ............................................. 17

Joint Liability Groups SF, MF, Tenant Farmers, Oral Lessees, Share Croppers Micro entrepreneurs /Artisans in Non-Farm Sector........18

ಸೌಹಾರ್ದ ಸಹಕಾರಿ ಚಳುವಳಿಯ ಪ್ರಸಕ್ತ ವಿದ್ಯಮಾನಗಳು ...............19


# ಸಂಪಾದಕೀಯ


## ಸಂವಾದ ಕಾರ್ಯಕ್ರಮದಲ್ಲಿ ಯುವಕರ ಭಾಗವಹಿಸುವಿಕೆ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಆಶಾದಾಯಕ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಪ್ರಸಕ್ತ ಸಾಲಿನಲ್ಲಿ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಹಾಗೂ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರಗಳಲ್ಲಿ ಸಹಕಾರ ಕುರಿತು ಯುವಕರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಸಂವಾದ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸಹಕಾರಿ ಗಣ್ಯರು, ಸಹಕಾರ ಸಂಸ್ಥೆಗಳ ಪ್ರತಿನಿಧಿಗಳು, ಸಹಕಾರ ಇಲಾಖೆಯ ಅಧಿಕಾರಿಗಳು, ಮಾಧ್ಯಮದವರು, ವಿಶ್ವವಿದ್ಯಾಲಯದವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಸಹಕಾರಿ ಕ್ಷೇತ್ರದ ಕಾರ್ಯನಿರ್ವಹಣೆ ಹಾಗೂ ಈ ಕ್ಷೇತ್ರದ ಮೂಲಕ ಆರ್ಥಿಕ ಅಭಿವೃದ್ಧಿ ಸಾಧ್ಯ ಎಂಬುದನ್ನು ಪ್ರಚಾರ ಮಾಡುವ, ತಿಳುವಳಿಕೆ ಮೂಡಿಸುವ ಈ ಪ್ರಯತ್ನದಲ್ಲಿ ಒಟ್ಟಾರೆ 400 ರಿಂದ 450 ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಗವಹಿಸಿರುವುದು ಸಂಘಟಕರಿಗೆ ಸಂತೋಷವೆನಿಸಿದೆ. ಇಲ್ಲಿ ಗಮನಿಸಬೇಕಾದ ವಿಷಯವೆಂದರೆ ಅವರುಗಳು ಕೇಳಿದ ಪ್ರಶ್ನೆಗಳು, ಅವರ ಆಸಕ್ತಿ ಮತ್ತು ಉತ್ಸಾಹಗಳು ಸಹಕಾರಿ ಕ್ಷೇತ್ರದ ಬಗ್ಗೆ ಕಾಳಜಿ ಇರುವವರಿಗೆ ಒಂದು ರೀತಿಯ ನೆಮ್ಮದಿಯನ್ನು ತಂದು ಕೊಟ್ಟಿದೆ.

110 ವರ್ಷಗಳ ಇತಿಹಾಸವಿರುವ ಸಹಕಾರ ಕ್ಷೇತ್ರ ಇತ್ತೀಚಿನ ದಿನಗಳಲ್ಲಿ ಕೇವಲ ಸೇವಾ ಸಂಸ್ಥೆಗಳಾಗಿ ಕಾರ್ಯನಿರ್ವಹಿಸದೇ ಉತ್ತಮ ಆರ್ಥಿಕ ಸಂಘಟನೆಗಳಾಗಿ (Financial Super Bazaar) ಕಾರ್ಯನಿರ್ವಹಿಸುವುದು ಅಗತ್ಯವಾಗಿದೆ. ಸಹಕಾರ ಕ್ಷೇತ್ರದ ಸಾಧನೆಗಳು, ಅವಕಾಶಗಳು ಇದರಿಂದ ಹೇಗೆ ಪ್ರಯೋಜನ ಪಡೆಯಬೇಕು ಎಂಬುದರ ಬಗ್ಗೆ ವಿದ್ಯಾರ್ಥಿಮಿತ್ರರಿಗೆ ಮಾಹಿತಿಗಳನ್ನು ಒದಗಿಸಿ ಸಹಕಾರ ಕ್ಷೇತ್ರದಲ್ಲಿ ಉತ್ತಮ ಆಡಳಿತ ನೀಡುವ ಜವಾಬ್ದಾರಿಯಿಂದ ಕಾರ್ಯನಿರ್ವಹಿಸುವ ಯುವ ಪಡೆಯೊಂದು ಸಿದ್ಧವಾಗುವುದು ಅಗತ್ಯ. ಈ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯು ಏರ್ಪಡಿಸಿರುವ ಈ ಕಾರ್ಯಕ್ರಮ ಸಮಯೋಚಿತವಾಗಿದೆ.

ಈ ವಿದ್ಯಾರ್ಥಿವೃಂದದವರಿಂದ ಮುಂಬರುವ ದಿನಗಳಲ್ಲಿ ಸಹಕಾರ ಕ್ಷೇತ್ರ ಉತ್ತಮವಾಗಿ ಮುನ್ನಡೆದು ಸಹಕಾರ ರಂಗದ ಮೂಲಕ ಈ ದೇಶದ ಜನರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿ ಕಾರ್ಯ ನಡೆಯುತ್ತದೆ ಎಂದು ಸಂತೋಷಪಡುವಂತಾಗಿದೆ ಎಂದು ಸಂಯುಕ್ತ ಸಹಕಾರಿಯು ಭಾವಿಸುತ್ತದೆ.

## ಬೆಳವಣಿಗೆಗೆ ಪೂರಕ



ಕೇಂದ್ರ ಹಣಕಾಸು ಸಚಿವ ಅರುಣ್ ಜೇಟ್ಲಿ ಅವರು ಮಂಡಿಸಿದ ನೂತನ ಸರ್ಕಾರದ ಮೊತ್ತಮೊದಲ ಪೂರ್ಣ ಪ್ರಮಾಣದ ಬಜೆಟ್‌ನಲ್ಲಿ ಭಾರಿ ಸುಧಾರಣಾ ಕ್ರಮಗಳ ಘೋಷಣೆಯಾಗಿಲ್ಲ. ಆದರೆ, ಆರ್ಥಿಕ ಚೇತರಿಕೆಗೆ ಪೂರಕವಾದಂತಹ ಹಲವು ಕ್ರಮಗಳನ್ನು ಪ್ರಕಟಿಸಲಾಗಿದೆ. ಕೇಂದ್ರ ತೆರಿಗೆಗಳ ಶೇ.42ರಷ್ಟನ್ನು ರಾಜ್ಯಗಳಿಗೆ ವರ್ಗಾಯಿಸಬೇಕಾದ ಹೊಸ ಹಣಕಾಸು ಒಕ್ಕೂಟ ವ್ಯವಸ್ಥೆಯಡಿ ಮಂಡಿಸಲಾಗುತ್ತಿರುವ ಮೊದಲ ಬಜೆಟ್ ಇದು. ಲಭ್ಯವಿರುವ ಕಡಿಮೆ ತೆರಿಗೆ ಸಂಪನ್ಮೂಲದೊಂದಿಗೆ ಕಾರ್ಯ ನಿರ್ವಹಿಸಬೇಕಾದ ಒತ್ತಡವನ್ನು ಕೇಂದ್ರ ನಿಭಾಯಿಸಬೇಕಾಗಿದೆ.

ಈ ಬಜೆಟ್ ಜನಪ್ರಿಯ ಯೋಜನೆಗಳನ್ನು ಪ್ರಕಟಿಸಿಲ್ಲ. ಆದರೆ ಸಾರ್ವಜನಿಕ ಆಸ್ತಿ ಸೃಷ್ಟಿ ಹಾಗೂ ಸಾಂಸ್ಥಿಕ ಬದಲಾವಣೆಗಳಿಗೆ ಗಮನ ನೀಡಲಾಗಿದೆ. ಆರ್ಥಿಕ ಬೆಳವಣಿಗೆ ಸಾಧಿಸಲು ರಾಜ್ಯಗಳನ್ನು ಸಮಾನ ಸಹಭಾಗಿಗಳನ್ನಾಗಿ ಮಾಡಿಕೊಳ್ಳಲಾಗಿದೆ. 'ಸಾರ್ವಜನಿಕ ವೆಚ್ಚಕ್ಕೆ ವಿನಿಯೋಗಿಸುವ ಪ್ರತಿ ರೂಪಾಯಿ ಜನರ ಬದುಕನ್ನು ಸುಧಾರಿಸಲು ಕೊಡುಗೆ ಸಲ್ಲಿಸುತ್ತದೆ' ಎಂದು ಜೇಟ್ಲಿಯವರು ನುಡಿದಿದ್ದಾರೆ.

## ದೂರದೃಷ್ಟಿಯ ಬಜೆಟ್



ಹಣಕಾಸು ಸಚಿವ ಅರುಣ್ ಜೇಟ್ಲಿ ಅವರು ದೂರದೃಷ್ಟಿಯಿಂದ ಕೂಡಿದ ಪ್ರಗತಿಪರವಾದ ಬಜೆಟ್ ಮಂಡಿಸಿದ್ದಾರೆ. ಇದು ಸ್ಪಷ್ಟ ಮುನ್ನೋಟವನ್ನು ಒಳಗೊಂಡ ವಾಸ್ತವಾಂಶದಿಂದ ಕೂಡಿದ ಬಜೆಟ್.

ಈ ಬಾರಿಯ ಬಜೆಟ್ ಹೂಡಿಕೆ ಸ್ನೇಹಿಯಾಗಿದೆ. ತೆರಿಗೆಗೆ ಸಂಬಂಧಿಸಿದ ಎಲ್ಲ ಅನುಮಾನಗಳಿಗೆ ತೆರೆ ಎಳೆದಿದೆ. ಸ್ಥಿರವಾದ, ದೂರದೃಷ್ಟಿಯಿಂದ ಕೂಡಿದ, ನ್ಯಾಯಸಮ್ಮತವಾದ ತೆರಿಗೆ ಪದ್ಧತಿಯ ಬಗ್ಗೆ ಹೂಡಿಕೆದಾರರಲ್ಲಿ ಭರವಸೆ ಮೂಡಿಸುತ್ತದೆ.

2022ರೊಳಗೆ ಸರ್ವರಿಗೂ ಸೂರು, ಉದ್ಯೋಗ, ಆರೋಗ್ಯ, ಶಿಕ್ಷಣ ಹಾಗೂ ಸಂಪೂರ್ಣ ವಿದ್ಯುದೀಕರಣದ ಗುರಿಯನ್ನು ಸಾಧಿಸಲು ಸಂಕಲ್ಪ ಮಾಡಲಾಗಿದೆ. ವಿದೇಶದಲ್ಲಿರುವ ಕಪ್ಪು ಹಣವನ್ನು ಭಾರತಕ್ಕೆ ಮರಳಿ ತರುವುದಕ್ಕೆ ಹೊಸ ಕಾನೂನಿನ ಪ್ರಸ್ತಾವ ಕೂಡ ಬಜೆಟ್‌ನಲ್ಲಿದೆ.

**– ನರೇಂದ್ರ ಮೋದಿ, ಪ್ರಧಾನಿ.**

### 61ನೇ ಅಖಿಲ ಭಾರತ ಸಹಕಾರ ಸಪ್ತಾಹ - 2014 ಸಮಾರೋಪ ಕಾರ್ಯಕ್ರಮ - ಬೆಳಗಾವಿ 20-11-2014

# ಸಹಕಾರ ಸಂಸ್ಥೆಗಳಿಗೆ, ಯಶಸ್ಸಿಗೆ ಸಹಕರಿಸಿದ ಕಾರ್ಯಕರ್ತರಿಗೆ ಅಭಿನಂದನಾ ಸಭೆ

61ನೇ ಅಖಿಲ ಭಾರತ ಸಹಕಾರ ಸಪ್ತಾಹ 2014ರ ಸಮಾರೋಪ ಕಾರ್ಯಕ್ರಮ ದಿನಾಂಕ : 20–11–2014ರಂದು ಬೆಳಗಾವಿಯಲ್ಲಿ ಭಾಗವಹಿಸಿದ ಸಹಕಾರ ಸಂಸ್ಥೆಗಳಿಗೆ, ಶ್ರಮಿಸಿದ ಕಾರ್ಯಕರ್ತರಿಗೆ ಅಭಿನಂದನೆ ಹಾಗೂ ವಿವಿಧ ಸಮಿತಿಗಳ ವಿಸರ್ಜನೆ ಸಭೆಯನ್ನು ಮಾಜಿ ಸಹಕಾರ ಸಚಿವ, ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕರಾದ ಶ್ರೀ ಲಕ್ಷ್ಮಣ ಎಸ್. ಸವದಿ ಇವರ ಅಧ್ಯಕ್ಷತೆಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥ ಜಾಂತಿಕರ ಇವರ ಉಪಸ್ಥಿತಿಯಲ್ಲಿ ಡಿ.ಸಿ.ಸಿ ಬ್ಯಾಂಕಿನ ಸಭಾಂಗಣದಲ್ಲಿ ನಡೆಸಲಾಯಿತು.

ಪ್ರಾರಂಭದಲ್ಲಿ ಸಪ್ತಾಹ ಆಚರಣಾ ಸಮಿತಿಯ ಸಂಚಾಲಕ ಹಾಗೂ ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಉಪಾಧ್ಯಕ್ಷ ಶ್ರೀ ಮಹಂತೇಶ ದೊಡ್ಡಗೌಡರರವರು ಎಲ್ಲರನ್ನು ಸ್ವಾಗತಿಸಿ, ಸಭೆಯ ಉದ್ದೇಶವನ್ನು ತಿಳಿಸಿದರು.

ನಂತರ ಶ್ರೀ ಗುರುನಾಥ ಜಾಂತಿಕರರವರು ಮಾತನಾಡಿ 61ನೇ ಅಖಿಲ ಭಾರತ ಸಹಕಾರ ಸಪ್ತಾಹದ ಸಮಾರೋಪ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದ ಬೆಳಗಾವಿ ಜಿಲ್ಲೆಯ ಎಲ್ಲ ಸಹಕಾರಿ ಸಂಸ್ಥೆಗಳು ಹಾಗೂ ಸಂಸ್ಥೆಗಳ ಪದಾಧಿಕಾರಿಗಳಿಗೆ ಮತ್ತು ಸಿಬ್ಬಂದಿಯವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತ ಸಹಕಾರ ಸಪ್ತಾಹದ ಆಚರಣೆಗೆ ಬೆಳಗಾವಿ ಜಿಲ್ಲೆಯ ಸಹಕಾರ ಕ್ಷೇತ್ರದ ಕಾರ್ಯನಿರ್ವಹಣೆಗೆ ಇನ್ನೂ ಹೆಚ್ಚಿನ ಉತ್ಸಾಹವನ್ನು ತುಂಬಿದಂತಾಗಿದೆ. ವಿಶೇಷವಾಗಿ ರಾಜ್ಯದ ಘನತೆವೆತ್ತ ರಾಜ್ಯಪಾಲರು ಭಾಗವಹಿಸಿ ಸಹಕಾರಿಗಳನ್ನು ಹುರಿದುಂಬಿಸಿರುವುದು ಹೆಚ್ಚಿನ ಸಂತೋಷವನ್ನು ತಂದಿದೆ ಎಂದು ತಿಳಿಸಿದರು.

ನಂತರ ಸಪ್ತಾಹದ ಆಚರಣೆಗಾಗಿ ಸಂಯುಕ್ತ ಸಹಕಾರಿಯು ಸೇರಿದಂತೆ ಬೆಳಗಾವಿ ಜಿಲ್ಲೆಯ ಸಹಕಾರಿ ಸಂಸ್ಥೆಗಳು ನೀಡಿದ ವಂತಿಗೆ ಹಾಗೂ ಖರ್ಚುವೆಚ್ಚಗಳನ್ನು ಪರಿಶೀಲಿಸಿ ಸರ್ವಾನುಮತದಿಂದ ಅನುಮೋದಿಸಲಾಯಿತು. ಉಳಿಕೆ ಹಣವನ್ನು ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನಲ್ಲಿ ನಿಶ್ಚಿತ ಠೇವಣಿರೂಪದಲ್ಲಿ ವಿನಿಯೋಗಿಸಬಹುದೆಂದು ನಿರ್ಣಯಿಸಲಾಯಿತು.

61ನೇ ಅಖಿಲ ಭಾರತ ಸಹಕಾರ ಸಪ್ತಾಹ ಹಾಗೂ ಸಮಾರೋಪ ಕಾರ್ಯಕ್ರಮ ದಿನಾಂಕ 20–11–2014ರ ಆಚರಣೆಗಾಗಿ ರಚಿಸಿದ್ದ ಸ್ವಾಗತ ಸಮಿತಿ, ಹಣಕಾಸು ಸಮಿತಿ, ಊಟೋಪಚಾರ ಸಮಿತಿ, ವೇದಿಕೆ ಸಮಿತಿ ಸೇರಿದಂತೆ ಇನ್ನಿತ್ತರ ಎಲ್ಲಾ ಸಮಿತಿಗಳನ್ನು ವಿಸರ್ಜಿಸಲು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥ ಜಾಂತಿಕರರವರು ಸಭೆಯ ಒಪ್ಪಿಗೆ ಕೇಳಿದಾಗ ಸಭೆಯು ಸರ್ವಾನುಮತದಿಂದ ತನ್ನ ಒಪ್ಪಿಗೆ ಸೂಚಿಸಿದ ನಂತರ ಎಲ್ಲ ಸಮಿತಿಗಳನ್ನು ವಿಸರ್ಜಿಸಲಾಗಿದೆ ಎಂದು ಘೋಷಿಸಲಾಯಿತು. ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸ್ವಾಗತ ಸಮಿತಿಯ ಸಹಸಂಚಾಲಕರಾಗಿ ಕಾರ್ಯನಿರ್ವಹಿಸಿದ ಶ್ರೀ ಶರಣಗೌಡ ಜಿ. ಪಾಟೀಲ್‌ರವರು ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

**ಸೌಹಾರ್ದ ಸಹಕಾರಿ ಬ್ಯಾಂಕುಗಳ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರುಗಳಿಗೆ ಆಡಳಿತ ಪರಿಣಿತಿ ತರಬೇತಿ**

# ತರಬೇತಿಯಿಂದ ಹೊಸ ವಿಚಾರಗಳ ಮಂಥನ ಸಾಧ್ಯ – ಶ್ರೀ ಮನೋಹರ ಮಸ್ಕಿ





ಸಂಯುಕ್ತ ಸಹಕಾರಿಯ ವತಿಯಿಂದ ರಾಜ್ಯದ ಸೌಹಾರ್ದ ಸಹಕಾರಿ ಬ್ಯಾಂಕುಗಳ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರುಗಳಿಗಾಗಿ ದಿನಾಂಕ 24, 25 ಫೆಬ್ರವರಿ 2015 ಈ ಎರಡು ದಿನಗಳಲ್ಲಿ ಬೆಳಗಾವಿ ಹತ್ತಿರವಿರುವ ಸ್ವಪ್ನಗಂಧ ರೆಸಾರ್ಟ (ವೈಲ್ಡರ್‌ನೆಸ್ಟ್ ನ್ಯಾಚ್ಯುರಲ್ ರೆಸಾರ್ಟ್), ಚೋರ್ಲಾಘಾಟ್, ನಾರ್ತ್‌ಗೋವಾದಲ್ಲಿ ಆಡಳಿತ ಪರಿಣಿತಿ ತರಬೇತಿ ಶಿಬಿರವನ್ನು ಏರ್ಪಡಿಸಲಾಗಿತ್ತು.

ಕಾರ್ಯಕ್ರಮವನ್ನು ಸುಕೋ ಬ್ಯಾಂಕ್ ಅಧ್ಯಕ್ಷರಾದ ಶ್ರೀ ಮನೋಹರ ಮಸ್ಕಿಯವರು ಉದ್ಘಾಟಿಸಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಗ್ರಾಹಕರಿಗೆ ಕ್ಷಿಪ್ರಗತಿಯಲ್ಲಿ ಸೇವೆ ಒದಗಿಸುವ ಹಾಗೂ ಬ್ಯಾಂಕಿಂಗ್ ವಿಧಾನವನ್ನು ಸರಳೀಕರಿಸುವ ಮತ್ತು ತಾಂತ್ರಿಕತೆಗಳನ್ನು ಅಳವಡಿಸುವ ಹೊಸ ಹೊಸ ವಿಧಾನಗಳನ್ನು ಅನುಸರಿಸಲಾಗುತ್ತಿದೆ. ಬ್ಯಾಂಕಿನ ಆಡಳಿತ ವರ್ಗದವರು ಈ ಎಲ್ಲ ವಿಧಾನಗಳನ್ನು ಅರಿತಾಗ ಮಾತ್ರ ಬ್ಯಾಂಕಿನ ಆಡಳಿತ ವ್ಯವಸ್ಥೆಯನ್ನು ಉತ್ತಮಗೊಳಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು. ವಾಣಿಜ್ಯ ಬ್ಯಾಂಕುಗಳು ಮತ್ತು ವಿದೇಶಿ ಬ್ಯಾಂಕುಗಳು ಕಾರ್ಪೋರೇಟ್ ವ್ಯವಸ್ಥೆಗಳನ್ನು ಅಳವಡಿಸಿ ಕಾಗದ ರಹಿತ (ಪೇಪರ್ ಲೆಸ್) ಬ್ಯಾಂಕಿಂಗ್‌ನತ್ತ ಓಡುತ್ತಿರುವಾಗ ಸೌಹಾರ್ದ ಸಹಕಾರಿ ಬ್ಯಾಂಕುಗಳು ಸಹಿತ ಇನ್ನೂ ಒಂದು ಹೆಜ್ಜೆ ಮುಂದೆ ವಿಚಾರ ಮಾಡಿ ಸಹಕಾರ ಬ್ರಾಂಡ್ ಇಮೇಜನ್ನು ಬೆಳೆಸುವತ್ತ ಗಮನ ಹರಿಸುವುದು ಅಗತ್ಯ. ಆದ್ದರಿಂದ ಸಂಯುಕ್ತ ಸಹಕಾರಿ ಈ ತರಬೇತಿ ವ್ಯವಸ್ಥೆ ಸಮಯೋಚಿತವೆಂದು ತಿಳಿಸಿದರು.

## ಸೌಹಾರ್ದ ಸಹಕಾರಿ ಬ್ಯಾಂಕುಗಳಿಗಾಗಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದಕ್ಕೆ ಸಂಯುಕ್ತ ಸಹಕಾರಿ ಬದ್ಧವಾಗಿದೆ – ಶ್ರೀ ಗುರುನಾಥ ಜಾಂತಿಕರ

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಗುರುನಾಥ ಜಾಂತಿಕರರವರು ಮಾತನಾಡಿ ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಗೆ ಸಂಯುಕ್ತ ಸಹಕಾರಿ ಅನೇಕ ರೀತಿಯ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿದೆ. ಸೌಹಾರ್ದ ಸಹಕಾರಿ ಬ್ಯಾಂಕುಗಳಿಗೆ ಅವಶ್ಯಕವಾಗುವ ಎಲ್ಲ ವಿಧವಾದ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದಕ್ಕೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಬದ್ಧವಾಗಿದೆ. ಈ ಬಗ್ಗೆ ಕಾರ್ಯಕ್ರಮ ಹಮ್ಮಿಕೊಳ್ಳುವ ಪೂರ್ವದಲ್ಲಿ ಸೌಹಾರ್ದ ಸಹಕಾರಿ ಬ್ಯಾಂಕುಗಳ ಪ್ರತಿನಿಧಿಗಳ ಜೊತೆಗೆ ಸಮಾಲೋಚಿಸಿ, ತರಬೇತಿಯಲ್ಲಿ ಅಳವಡಿಸಬಹುದಾದ ವಿಷಯಗಳು, ಆಮಂತ್ರಿಸಬಹುದಾದ ವಿಷಯಗಳ ಕುರಿತು ಚರ್ಚಿಸಲಾಗುತ್ತದೆ ಎಂದು ತಿಳಿಸಿದರು. ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ನಡೆಯುತ್ತಿರುವ ವಿವಿಧ ರೀತಿಯ ತರಬೇತಿ ಕಾರ್ಯಕ್ರಮಗಳು ಅತ್ಯಂತ ಉತ್ತಮ ಗುಣಮಟ್ಟದ್ದಾಗಿರುತ್ತವೆ ಎಂದು ಸಹಕಾರ ಇಲಾಖೆ, ಸಹಕಾರಿಗಳು ಹಾಗೂ ಸಂಪನ್ಮೂಲ ವ್ಯಕ್ತಿಗಳು ಮತ್ತು ಸೌಹಾರ್ದ ಸಹಕಾರಿಗಳ ಹಂತದಲ್ಲಿ ಅಭಿಪ್ರಾಯಪಡಲಾಗುತ್ತಿದೆ. ಇದು ನಮ್ಮೆಲ್ಲರ ಹೆಮ್ಮೆಯ ವಿಷಯ. ಇದನ್ನು ಉಳಿಸಿ ಬೆಳೆಸಿಕೊಂಡು ಹೋಗುವಲ್ಲಿ ಎಲ್ಲ ಸೌಹಾರ್ದ ಸಹಕಾರಿಗಳು ಸಹಕರಿಸಬೇಕು ಎಂದು ಮನವಿ ಮಾಡುವುದರ ಜೊತೆಗೆ ತಮ್ಮ ಅಭಿಪ್ರಾಯ ಹಾಗೂ ಮಾರ್ಗದರ್ಶನ ನೀಡಲು ಕೋರಿದರು.

# ತರಬೇತಿ ಅಭಿವೃದ್ಧಿಯ ವೇಗ ಹೆಚ್ಚಿಸುವುದರ ಜೊತೆಗೆ ಸಮಸ್ಯೆಗಳ ಪರಿಹಾರ ಚಿಂತನೆಗೆ ಆದ್ಯತೆ ನೀಡಬೇಕು – ಶ್ರೀ ಎಸ್.ಆರ್. ಲಕ್ಷ್ಮೀಕಾಂತರೆಡ್ಡಿ

ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಮರ್ಚೆಂಟ್ಸ್ ಸೌಹಾರ್ದ ಸಹಕಾರಿ ಬ್ಯಾಂಕಿನ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ಹಿರಿಯ ನಿರ್ದೇಶಕರಾದ ಶ್ರೀ ಎಸ್. ಆರ್.ಲಕ್ಷ್ಮೀಕಾಂತರೆಡ್ಡಿಯವರು ಇದೊಂದು ಉತ್ತಮ ಕಾರ್ಯಕ್ರಮ. ಪರಿಸರ ಚೆನ್ನಾಗಿದೆ. ವಿಷಯ ಹಾಗೂ ಸಂಪನ್ಮೂಲ ವ್ಯಕ್ತಿಗಳ ಜೊತೆಗೆ ಉಳಿದ ವ್ಯವಸ್ಥೆಗಳು ಚೆನ್ನಾಗಿವೆ.

ಇಂತಹ ತರಬೇತಿ ಕಾರ್ಯಕ್ರಮಗಳಲ್ಲಿ ಹೆಚ್ಚಿನ ವಿಚಾರ ತಿಳಿಸುವುದರ ಜೊತೆಗೆ ಸೌಹಾರ್ದ ಸಹಕಾರಿ ಬ್ಯಾಂಕುಗಳು ಎದುರಿಸುತ್ತಿರುವ ಸಮಸ್ಯೆಗಳ ಹಾಗೂ ಅವುಗಳ ಪರಿಹಾರಗಳ ಬಗ್ಗೆ ಚಿಂತನೆಯಾಗಬೇಕು. ಸಮಸ್ಯೆಗಳನ್ನು ಪರಿಹರಿಸಿಕೊಡುವಲ್ಲಿ ಸಂಯುಕ್ತ ಸಹಕಾರಿಯವರು ನೇತೃತ್ವ ವಹಿಸಬೇಕು ಎಂದು ತಿಳಿಸಿದರು. ಸೌಹಾರ್ದ ಸಹಕಾರಿ ಬ್ಯಾಂಕುಗಳಿಗಾಗಿ ಹೆಚ್ಚಿನ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಲಹೆ ನೀಡಿದರು.

ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ. ಪಾಟೀಲರವರು ಸ್ವಾಗತ ಹಾಗೂ ಪ್ರಾಸ್ತಾವಿಕ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಆರ್.ಎನ್.ದೇಶಪಾಂಡೆಯವರು ಉಪಸ್ಥಿತರಿದ್ದರು.

ತರಬೇತಿ ಕಾರ್ಯಕ್ರಮದಲ್ಲಿ ಕಾರ್ಪೋರೇಟ್ ಆಡಳಿತ ವ್ಯವಸ್ಥೆ ಹಾಗೂ ಸಹಕಾರಿಗಳು ಎಂಬ ವಿಷಯದ ಬಗ್ಗೆ ಶ್ರೀ ಮನೋಹರ ಮಸ್ಕಿಯವರು, ಸಹಕಾರ ಸಂಸ್ಥೆಗಳಲ್ಲಿಯ ಶೇರುಗಳಿಗೆ ಪ್ರೀಮಿಯಮ್ ಆಕರನೆ ವ್ಯವಸ್ಥೆ ಜಾರಿಗೊಳಿಸುವ ಕುರಿತು ಶ್ರೀ ಮಧುಕರ ಹೆಗಡೆ, ಬ್ಯಾಂಕಿಂಗ್ ಕ್ಷೇತ್ರದ ಹೊಸ ತಂತ್ರಜ್ಞಾನಗಳು ವಿಷಯಗಳ ಬಗ್ಗೆ ಶ್ರೀ ಶ್ಯಾಮ್‌ಪ್ರಸಾದರವರು ಉಪನ್ಯಾಸ ನೀಡಿದರು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕಿನ ಅಧ್ಯಕ್ಷ ಶ್ರೀ ವಿಶ್ವನಾಥ ಹಿರೇಮಠರವರು ಕಾರ್ಯಕ್ರಮ ತುಂಬ ಉಪಯುಕ್ತವಾಗಿತ್ತು ಎಂದು ನುಡಿದರು..ಕಾರ್ಯಕ್ರಮ ಚೆನ್ನಾಗಿತ್ತು ಎಂದು ಭಾಗವಹಿಸಿದ ಅನೇಕ ಪ್ರತಿನಿಧಿಗಳು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ. ಪಾಟೀಲರವರು ಬ್ಯಾಂಕುಗಳ ಪ್ರತಿನಿಧಿಗಳು ನೀಡಿರುವ ಸಲಹೆ ಸೂಚನೆಗಳನ್ನು ಅಳವಡಿಸಿ ಮುಂಬರುವ ದಿನಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು. ಸಂಯುಕ್ತ ಸಹಕಾರಿಯ ಅಧಿಕಾರಿ ಶ್ರೀ ಗುರುಪ್ರಸಾದ್‌ರವರು ವಂದನಾರ್ಪಣೆಯನ್ನು ಮಾಡಿದರು.

## ಆಯ್ಕೆ ಹಾಗೂ ಅಭಿನಂದನೆ



ಬೆಳಗಾವಿ ವಿಭಾಗೀಯ ಕಛೇರಿ ಮತ್ತು ಶಿವಾ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೆಳಗಾವಿ ಇವರ ವತಿಯಿಂದ ಜಂಟಿಯಾಗಿ ದಿನಾಂಕ 2.03.2015ರಂದು ಬೆಳಗಾವಿ ಜಿಲ್ಲೆಯ ಪ್ರತಿಷ್ಠಿತ ಶ್ರೀ ಬಸವೇಶ್ವರ ಅರ್ಬನ್ ಸಹಕಾರಿ ಬ್ಯಾಂಕ್ ನಿ., ಬೆಳಗಾವಿಗೆ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಶ್ರೀ ವಿಜಯಕುಮಾರ ಅಂಗಡಿ ಹಾಗೂ ಉಪಾಧ್ಯಕ್ಷರಾಗಿ ಆಯ್ಕೆಯಾದ ಶ್ರೀ ಸಿ ಎಚ್ ಕಟ್ಟಿಮನಿಯವರಿಗೆ ಸನ್ಮಾನ.

**ಬೆಳಗಾವಿ ಹಾಗೂ ವಿಜಯಪುರ ವಿಶ್ವವಿದ್ಯಾಲಯಗಳಲ್ಲಿ "ಯುವಜನ ಮತ್ತು ಸಹಕಾರ" ಸಹಕಾರ ಸಂವಾದ ಕಾರ್ಯಕ್ರಮ**

# ಜಾಗೃತ ಯುವಶಕ್ತಿಯಿಂದ ಸದೃಢ ದೇಶ ನಿರ್ಮಾಣ ಸಾಧ್ಯ - ಶ್ರೀ ಎಸ್.ಎಸ್. ಪಾಟೀಲ್





**ಬೆಳಗಾವಿ :** ದಿನಾಂಕ 23 ಫೆಬ್ರವರಿ 2015ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ, ಅರ್ಥಶಾಸ್ತ್ರ ವಿಭಾಗ, ಬೆಳಗಾವಿ ಇವರುಗಳ ಸಂಯುಕ್ತ ಆಶ್ರಯದಲ್ಲಿ "ಯುವಜನ ಮತ್ತು ಸಹಕಾರ" ಸಹಕಾರ ಸಂವಾದ ಕಾರ್ಯಕ್ರಮವನ್ನು ಕುವೆಂಪು ಸಭಾಂಗಣ, ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇಲ್ಲಿ ಆಯೋಜಿಸಲಾಗಿತ್ತು.

## ಯುವಜನತೆಯನ್ನು ಸಹಕಾರ ಕ್ಷೇತ್ರದ ಕಡೆಗೆ ಜಾಗೃತರನ್ನಾಗಿಸುವ ಸಂವಾದ ಕಾರ್ಯಕ್ರಮದ ಪ್ರಯತ್ನ ಶ್ಲಾಘನೀಯ - ಪ್ರೊ. ಡಿ.ಆರ್. ಅಲಬಾಳ

ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿಯ ಉಪಕುಲಪತಿಗಳಾದ ಪ್ರೊ. ಡಿ.ಆರ್. ಅಲಬಾಳರವರು ಯುವಜನತೆಯನ್ನು ಸಹಕಾರ ಕ್ಷೇತ್ರದ ಕಡೆಗೆ ಜಾಗೃತರನ್ನಾಗಿಸುವ ಇಂತಹ ಸಂವಾದ ಕಾರ್ಯಕ್ರಮದ ಪ್ರಯತ್ನ ಶ್ಲಾಘನೀಯ ಎಂದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮಾಜಿ ಸಹಕಾರ ಸಚಿವರಾದ ಶ್ರೀ ಎಸ್.ಎಸ್.ಪಾಟೀಲ ರವರು ದೇಶದ ಭವಿಷ್ಯ ಯುವಜನತೆಯ ಕೈಯಲ್ಲಿದೆ, ಯುವ ಜನತೆಯನ್ನು ಶಕ್ತಿಯನ್ನಾಗಿಸುವ, ಸಂಸ್ಕಾರಯುತವಾಗಿ ಬೆಳೆಸುವ ಜವಾಬ್ದಾರಿಯನ್ನು ಶಿಕ್ಷಕರು ಮಾಡಬೇಕು. ಯುವಕರು ಸಹಕಾರ ಕ್ಷೇತ್ರದ ಮೂಲಕ ಗ್ರಾಮೀಣಾಭಿವೃದ್ಧಿಗೆ ಕಾರಣವಾಗಬೇಕು, ಪರಸ್ಪರ ಸಹಕಾರದಿಂದ ದೇಶ ಕಟ್ಟುವ ಕಾರ್ಯವಾಗಬೇಕು ಎಂದರು. ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ರಾವ್‌ಸಾಹೇಬ ಅ. ಪಾಟೀಲ್, ಸಹಕಾರಿಗಳ ಜಂಟಿ ನಿಬಂಧಕರಾದ ಶ್ರೀ ಶಿವ ಕುಲಕರ್ಣಿ, ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನ ಉಪಾಧ್ಯಕ್ಷರಾದ ಶ್ರೀ ಮಹಾಂತೇಶ ದೊಡ್ಡಗೌಡರ ರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

## ಯುವಕರು ಈ ದೇಶದ ಹಾಗೂ ಸಹಕಾರಿ ಕ್ಷೇತ್ರದ ಅಭಿವೃದ್ಧಿಯ ಆಶಾಕಿರಣ - ಶ್ರೀ ಗುರುನಾಥ ಜಾಂತಿಕರ

ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ ರವರು ಮಾತನಾಡುತ್ತಾ ವಿಶ್ವದ ಎಲ್ಲ ದೇಶಗಳಿಗೆ ಹೋಲಿಸಿದರೆ ನಮ್ಮ ದೇಶದಲ್ಲಿ ಯುವಕರ ಜನಸಂಖ್ಯೆಯು ಗರಿಷ್ಠ ಪ್ರಮಾಣದಲ್ಲಿದೆ. ಅವರಿಗೆ ಸಹಕಾರಿ ಕ್ಷೇತ್ರದ ಕಾರ್ಯನಿರ್ವಹಣೆಯ ಬಗ್ಗೆ ತಿಳುವಳಿಕೆ ಅಗತ್ಯ. ಅದಕ್ಕಾಗಿ ಈ ಕಾರ್ಯಕ್ರಮ ಎಂದು ತಿಳಿಸಿದರು.

ನಂತರ "ಸಹಕಾರ ಕ್ಷೇತ್ರದ ಸಾಧನೆಗಳು, ವೈಫಲ್ಯಗಳು, ಅವಕಾಶಗಳು ಹಾಗೂ ಯುವಜನರ ಪಾತ್ರ" ಕುರಿತು ಡಾ. ಎಸ್.ಎ.ಸಿದ್ಧಾಂತಿಯವರು ಉಪನ್ಯಾಸವನ್ನು ನೀಡಿದರು. ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ವೈ.ಟಿ.ಪಾಟೀಲ್, ಶ್ರೀ ದಯಾನಂದ ಬಾಬುರಾವ ಜಾಧವ್,

ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್, ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ. ತಳವಾರ ಸಾಬಣ್ಣ, ಪ್ರಾಧ್ಯಾಪಕರಾದ ಶ್ರೀ ಮುಕ್ತಾ ಎಸ್. ಆಡಿ, ವಿಜಯವಾಣಿ ದಿನಪತ್ರಿಕೆಯ ಸ್ಥಾನಿಕ ಸಂಪಾದಕರಾದ ಶ್ರೀ ಎಂ.ಕೆ.ಹೆಗಡೆ, ಹಾಲು ಉತ್ಪಾದಕರ ಒಕ್ಕೂಟದ ಅಧಿಕಾರಿ ಶ್ರೀ ಜೋಷಿ, ಅನೇಕ ಸಹಕಾರಿಗಳ ಪದಾಧಿಕಾರಿಗಳು, ಸಹಕಾರಿ ಧುರೀಣರು ಉಪಸ್ಥಿತರಿದ್ದರು. ಕಾರ್ಯಕ್ರಮದ ಕೊನೆಯಲ್ಲಿ ಮಾತನಾಡಿದ ಪ್ರೊ. ತಳವಾರ ಸಾಬಣ್ಣರವರು ಇದೊಂದು ಉತ್ತಮ ಸಂವಾದ ಕಾರ್ಯಕ್ರಮವಾಗಿತ್ತು. ಸಹಕಾರವನ್ನು ಮುಂದುವರೆಸಿ ಕೊಂಡು ಹೋಗುವ ನಿಟ್ಟಿನಲ್ಲಿ 'ಸಹಕಾರ ಅಧ್ಯಯನ ಪೀಠ'ವನ್ನು ಸ್ಥಾಪಿಸಲು ಪ್ರಯತ್ನಿಸುವ ಮೂಲಕ ಈ ಕಾರ್ಯಕ್ರಮದ ಉಪಯುಕ್ತತೆಯನ್ನು ಸಾಧಿಸಲಾಗುವುದು ಎಂದು ತಿಳಿಸಿದರು. ಈ ಸಂವಾದ ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ 200 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಅಧ್ಯಯನ ಪೀಠ ಸ್ಥಾಪನೆಗೆ ವಿಶ್ವವಿದ್ಯಾಲಯದ ಒಲವು – ಪ್ರೊ. ತಳವಾರ ಸಾಬಣ್ಣ

ಕೊನೆಯಲ್ಲಿ ಕಾರ್ಯಕ್ರಮದ ಬಗ್ಗೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ತಳವಾರ ಸಾಬಣ್ಣರವರು ಇದೊಂದು ಉತ್ತಮ ಕಾರ್ಯಕ್ರಮ. ಈ ಕಾರ್ಯಕ್ರಮದ ನಂತರ ವಿಶ್ವವಿದ್ಯಾಲಯದಲ್ಲಿ ಸಹಕಾರ ಕುರಿತು ಒಂದು ಅಧ್ಯಯನ ಪೀಠವನ್ನು ಪ್ರಾರಂಭಿಸಲು ವಿಶ್ವವಿದ್ಯಾಲಯ ಬದ್ಧವಾಗಿದೆ. ಈ ಬಗ್ಗೆ ಸಂಯುಕ್ತ ಸಹಕಾರಿಯವರು ಮುಂದಿನ ಕ್ರಮದ ಬಗ್ಗೆ ಆಲೋಚಿಸಬಹುದು ಎಂದು ತಿಳಿಸಿದರು. ಮುಂಬರುವ ದಿನಗಳಲ್ಲಿ ಇಂತಹ ಕಾರ್ಯಕ್ರಮಗಳನ್ನು ರಾಜ್ಯದ ಎಲ್ಲ ವಿಶ್ವವಿದ್ಯಾನಿಲಯಗಳಲ್ಲಿ ಹಮ್ಮಿಕೊಳ್ಳುವ ಮೂಲಕ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳನ್ನು ಯುವಕರಿಗೆ ಪರಿಚಯಿಸುವ ಸಹಕಾರ ಕ್ಷೇತ್ರದ ಬಗ್ಗೆ ಸಕಾರಾತ್ಮಕ ಭಾವನೆಗಳನ್ನು ಬಿಂಬಿಸುವ ಪ್ರಯತ್ನ ಸಂಯುಕ್ತ ಸಹಕಾರಿಯದ್ದಾಗಿದೆ.

# ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರದಲ್ಲಿ ಸಹಕಾರ ಸಂವಾದ ಕಾರ್ಯಕ್ರಮ
## ವಿದ್ಯಾರ್ಥಿಗಳಲ್ಲಿ ಸಹಕಾರ ಜಾಗೃತಿ ಮೂಡಿಸುವ ಕಾರ್ಯ ಶ್ಲಾಘನೀಯ : ಶ್ರೀ ಅರುಣ ಶಹಾಪುರ


ಕಾರ್ಯಕ್ರಮ ಉದ್ಘಾಟನೆ


ಉದ್ಘಾಟನಾ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವ ಗಣ್ಯರು

**ವಿಜಯಪುರ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ದಿನಾಂಕ 26 ಫೆಬ್ರವರಿ 2015 ರಂದು ಯುವಕರು ಹಾಗೂ ಸಹಕಾರ ಚಳುವಳಿ ಸಹಕಾರ ಕುರಿತು ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮವನ್ನು ವಿಶ್ವವಿದ್ಯಾಲಯದ ಕುಲಸಚಿವ ಶ್ರೀ ಎಸ್.ಎ.ಕಾಜಿಯವರು ಉದ್ಘಾಟಿಸಿ ಇದೊಂದು ನೂತನ ಪ್ರಯೋಗ. ಇದರಿಂದ ವಿದ್ಯಾರ್ಥಿಗಳಿಗೆ ಸಹಕಾರ ಸಂಸ್ಥೆಗಳ ಕಾರ್ಯಚಟುವಟಿಕೆಗಳ ಬಗ್ಗೆ ಅರಿವು ಮೂಡುತ್ತದೆ. ಇದೊಂದು ಉತ್ತಮ ಕಾರ್ಯ. ಈ ಕಾರ್ಯವನ್ನು ನಿರ್ವಹಿಸುತ್ತಿರುವ ಸಂಯುಕ್ತ ಸಹಕಾರಿಯನ್ನು ಅಭಿನಂದಿಸುತ್ತೇನೆ ಎಂದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿ ನಿರ್ದೇಶಕ, ವಿಧಾನ ಪರಿಷತ್ ಸದಸ್ಯ ಶ್ರೀ ಅರುಣ ಶಹಾಪುರರವರು ಮಾತನಾಡಿ ಈ ಪ್ರಯೋಗ ನಿಜವಾಗಲೂ ನನಗೆ ಸಂತೋಷವನ್ನು ತಂದಿದೆ. ವಿದ್ಯಾರ್ಥಿಗಳು ಸಹಕಾರ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ತಿಳಿದುಕೊಳ್ಳುವ ಸದಾವಕಾಶ, ಹೊಸ ಸಹಕಾರಿ ಸಂಸ್ಥೆಗಳನ್ನು ಹುಟ್ಟುಹಾಕುವ ಪ್ರೇರಣೆ ನೀಡಿದಂತಾಗುತ್ತದೆ. ಸಂಯುಕ್ತ ಸಹಕಾರಿಯು ಮುಂಬರುವ

ದಿನಗಳಲ್ಲಿ ರಾಜ್ಯದ ಎಲ್ಲ ವಿಶ್ವವಿದ್ಯಾನಿಲಯಗಳಲ್ಲಿ ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಉದ್ದೇಶಿಸಿರುವುದರಿಂದ ರಾಜ್ಯದ ಸಹಕಾರಿ ಕ್ಷೇತ್ರದ ಕಾರ್ಯ ನಿರ್ವಹಣೆಗೆ ಯುವ ಸಹಕಾರಿ ಪಡೆಯನ್ನು ನಿರ್ಮಿಸಲು ಉದ್ದೇಶಿಸಿದೆ. ಈ ಪ್ರಯತ್ನದ ಸಾರ್ಥಕತೆಗೆ ವಿಶ್ವವಿದ್ಯಾನಿಲಯಗಳು ಸಹಕರಿಸುತ್ತಿರುವುದು ಸಂತೋಷದ ಹಾಗೂ ಹೆಮ್ಮೆಯ ವಿಷಯ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ನಿವೃತ್ತ ಅಪರ ನಿಬಂಧಕ ಶ್ರೀ ಎಮ್.ಜಿ.ಪಾಟೀಲ್ ಸಹಕಾರ ಕ್ಷೇತ್ರದ ಸಾಧನೆಗಳನ್ನು ತಿಳಿಸಿ ಯುವಕರ ಮೇಲೆ ಹೆಚ್ಚಿನ ಜವಾಬ್ದಾರಿಯಿದೆ. ಯುವಕರು ಆಸಕ್ತಿಯಿಂದ ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸಹಕಾರ ಕ್ಷೇತ್ರದ ಬಗ್ಗೆ ಮಾಹಿತಿಯನ್ನು ಪಡೆದುಕೊಂಡು ಸಹಕಾರಿ ಸಂಸ್ಥೆಗಳನ್ನು ಹುಟ್ಟುಹಾಕಿ ವ್ಯವಸ್ಥಿತವಾಗಿ ನಡೆಸಿಕೊಂಡು ಹೋಗಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥ ಜಾಂತಿಕರರವರು ಯುವಕರು ಈ ದೇಶದ ಆರ್ಥಿಕ ಅಬಿವೃದ್ಧಿಯ ಆಶಾಕಿರಣ. ಅವರಿಗೆ ದೇಶದ ಅರ್ಥ ವ್ಯವಸ್ಥೆಯಲ್ಲಿ ಸಹಕಾರ ಕ್ಷೇತ್ರದ ಪಾಲುಗಾರಿಕೆ, ಸಹಕಾರ ಕ್ಷೇತ್ರ ಸಾಧನೆ, ಸಹಕಾರಿ ಸಂಘ ಸಂಸ್ಥೆಗಳ ಅವಶ್ಯಕತೆಗಳ ಬಗ್ಗೆ ಅರಿವು ಮೂಡಿಸಿ ಅವರುಗಳು ಸಹಕಾರ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮಾಡುವುದು ಸಂಯುಕ್ತ ಸಹಕಾರಿಯ ಉದ್ದೇಶ ಎಂದು ತಿಳಿಸಿದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿ ನಿರ್ದೇಶಕ ಶ್ರೀ ಜಿ.ಎನ್.ಪಾಟೀಲ, ವಿಜಯಪುರ ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಶ್ರೀ ಚನ್ನಪ್ಪಗೌಡ ಸಂಗೊಂಡವರ ರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

**ಪ್ರಧಾನ ವಿಷಯ ಮಂಡನೆ :** ಪ್ರಧಾನ ವಿಷಯವನ್ನು ಸಹಕಾರ ತಜ್ಞ ಹಾಗೂ ಪ್ರಾಂತೀಯ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ಸಲಹೆಗಾರ ಶ್ರೀ ಸಿದ್ಧಾಂತಿಯವರು ಪ್ರಸ್ತುತಪಡಿಸಿ ಸಹಕಾರ ಕ್ಷೇತ್ರದ ಶಕ್ತಿ, ಸಾಧನೆಗಳು, ಅವಕಾಶಗಳು ಮತ್ತು ಸವಾಲುಗಳ ಬಗ್ಗೆ ವಿಶ್ವದ ವಿವಿಧ ರೀತಿಯ ಸಹಕಾರ ಚಳುವಳಿಯ ಬಗ್ಗೆ ತಿಳಿಸಿ, ಇದರಲ್ಲಿ ಯುವಕರಿಗೆ ಹೆಚ್ಚಿನ ಅವಕಾಶಗಳಿವೆ. ಯುವಕರು ಈ ಕ್ಷೇತ್ರಕ್ಕೆ ಬರುವಂತೆ ಮಾಡಲು ರಾಜ್ಯದ ಸಂಯುಕ್ತ ಸಹಕಾರಿಯವರು ಇಂತಹ ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿರುವುದು ಮತ್ತು ಯುವಕರ ಭಾಗವಹಿಸುವಿಕೆ ಸಂತೋಷದಾಯಕವಾಗಿದೆ ಎಂದು ತಿಳಿಸಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಹಿಳಾ ವಿಶ್ವವಿದ್ಯಾಲಯದ ಮೌಲ್ಯಮಾಪನ ವಿಭಾಗದ ಕುಲಸಚಿವ ಶ್ರೀ ಶ್ರೀನಾಥರಾವರವರು ವಹಿಸಿದ್ದರು.

**ಸಂವಾದ ಕಾರ್ಯಕ್ರಮ :** ಸಂವಾದಕಾರರಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಭಾಸ್ಕರ ಹೆಗಡೆ ಕಾಗೇರಿಯವರು ಕಾರ್ಯ ನಿರ್ವಹಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥ ಜಾಂತಿಕರ ವಹಿಸಿದ್ದರು. ಸಂವಾದದ ಸಂಪನ್ಮೂಲ ವ್ಯಕ್ತಿಗಳಾಗಿ ಡಾ.ಎಸ್.ಎ.ಸಿದ್ಧಾಂತಿ, ಮಹಿಳಾ ವಿಶ್ವವಿದ್ಯಾಲಯದ ವಿದ್ಯಾರ್ಥಿ ಕ್ಷೇಮಪಾಲ ನಿರ್ದೇಶಕಿ ಪ್ರೊ.ಆರ್.ಸುನಂದಮ್ಮ, ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಮದರಿಯವರು, ವಿಜಯಪುರ ಜಿಲ್ಲೆಯ ಸಂಯುಕ್ತ ಕರ್ನಾಟಕ ಪತ್ರಿಕೆಯ ಮುಖ್ಯ ವರದಿಗಾರ ಶ್ರೀ ವಾಸುದೇವ ಹೆರಕಲ್, ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಜಿ.ಎನ್.ಪಾಟೀಲ್, ವಿಜಯಪುರ ಜಿಲ್ಲೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ಶ್ರೀಎ.ಎಂ. ಮಿರ್ಜಿ ಇವರುಗಳು ಭಾಗವಹಿಸಿದ್ದರು. ಮಹಿಳಾ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ, ವಾಣಿಜ್ಯ, ಸಮಾಜ ಶಾಸ್ತ್ರ ಹಾಗೂ ಇತರೆ ವಿಭಾಗಗಳ 200ಕ್ಕೂ ಹೆಚ್ಚು ವಿದ್ಯಾರ್ಥಿನಿಯರು, ವಿಜಯಪುರ ನಗರದ ವಿವಿಧ ಸಹಕಾರ ಸಂಸ್ಥೆಗಳ ಹಾಗೂ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು, ಅಧಿಕಾರಿಗಳು ಭಾಗವಹಿಸಿದ್ದರು.

ಕೊನೆಯಲ್ಲಿ ವಂದನಾರ್ಪಣೆ ಮಾಡಿದ ಮಹಿಳಾ ವಿಶ್ವವಿದ್ಯಾಲಯದ ವಿದ್ಯಾರ್ಥಿ ಕ್ಷೇಮಪಾಲ ನಿರ್ದೇಶಕಿ ಪ್ರೊ.ಆರ್. ಸುನಂದಮ್ಮರವರು ಈ ಕಾರ್ಯಕ್ರಮ ಇಲ್ಲಿಗೆ ಮುಗಿಯಬಾರದು. ಸಹಕಾರ ಸಂಸ್ಥೆಗಳನ್ನು ಹೇಗೆ ಪ್ರಾರಂಭಿಸಬೇಕು ಎಂಬ ಬಗ್ಗೆ ಮತ್ತೊಂದು ಕಾರ್ಯಾಗಾರವನ್ನು ಏರ್ಪಡಿಸಬೇಕು ಎಂದು ಸಂಯುಕ್ತ ಸಹಕಾರಿಯನ್ನು ವಿನಂತಿಸಿದರು.




ಸಂವಾದ ಕಾರ್ಯಕ್ರಮ

# EMTS - Express Money Transfer Service

ಸಹಕಾರಿ ಸಂಸ್ಥೆಗಳಿಗಾಗಿಯೇ ರೂಪಿಸಿದ EMTS - Express Money Transfer Service ಎಂಬ ವಿನೂತನ ಹಣ ವರ್ಗಾವಣೆ ಯೋಜನೆಯ ಪರಿಚಯ ಕಾರ್ಯಕ್ರಮವನ್ನು ದಿನಾಂಕ : 04-02-2015 ರಂದು "ದಿ ಬೆಲ್ ಹೋಟೆಲ್ & ಕನ್ವೆನ್ಷನ್ ಸೆಂಟರ್" ಬೆಂಗಳೂರಿನಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ನೂರಕ್ಕೂ ಹೆಚ್ಚು ಸಹಕಾರಿಗಳು ಪಾಲ್ಗೊಂಡು, ಈ ಯೋಜನೆಯ ಮಾಹಿತಿ ಪಡೆದು, ಯೋಜನೆಯ ರೂವಾರಿಗಳಾದ ಶ್ರೀ ಮನೋಹರ ಮಸ್ಕಿಯವರನ್ನು ಶ್ಲಾಘಿಸಿದರು.

**EMTS ಯೋಜನೆಯ ವಿಶೇಷತೆಗಳು :**

1) ದೇಶದ ಯಾವುದೇ ವ್ಯಕ್ತಿಯ ಯಾವುದೇ ಬ್ಯಾಂಕ್ ಖಾತೆಗೆ ಹಣ ವರ್ಗಾಯಿಸಬಹುದು.
2) ಕಾನೂನುಬದ್ಧವಾಗಿ ವರ್ಗಾಯಿಸಬಹುದು.
3) ಅತ್ಯಂತ ತ್ವರಿತವಾಗಿ ವರ್ಗಾವಣೆ, ಕೆಲವೇ ಸೆಕೆಂಡುಗಳಲ್ಲಿ ಹಣ ಕಳುಹಿಸಿದವರಿಗೆ ಮತ್ತು ಪಡೆದವರಿಗೆ SMS ಮೂಲಕ ದೃಢೀಕರಣ.
4) Phone/DTH recharge ಮತ್ತು ಯಾವುದೇ Utility Bills ಪಾವತಿಸಬಹುದು.
5) ವ್ಯಾಪಾರ ಉದ್ದೇಶಕ್ಕಾಗಿ ಕೂಡ ಹಣ ವರ್ಗಾಯಿಸಬಹುದು. (Merchant Payments)
6) ಬ್ಯಾಂಕ್ ಸಮಯ ಮುಗಿದ ಮೇಲೂ ಹಣ ವರ್ಗಾವಣೆ ಮಾಡಬಹುದು ಹಾಗೂ ರಜಾ ದಿನಗಳಲ್ಲೂ ಹಣ ವರ್ಗಾವಣೆ ಮಾಡಬಹುದು.

## ನಿವೇಶನ ಬೇಕಾಗಿದೆ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ರಾಜಾಜಿನಗರ, ಮಲ್ಲೇಶ್ವರಂ, ಶೇಷಾದ್ರಿಪುರಂ, ಬಸವೇಶ್ವರನಗರ, ಯಶವಂತಪುರ ಸುತ್ತಮುತ್ತಲಿನ ಪ್ರದೇಶದಲ್ಲಿ 4000 ಚದರ ಅಡಿ ಅಳತೆಯ ನಿವೇಶನ ಅಗತ್ಯ ಇದೆ.

ಆಸಕ್ತರು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010 ಇವರನ್ನು ಸಂಪರ್ಕಿಸಲು ಕೋರಿದೆ. ದೂರವಾಣಿ : 8884466703, 080–23378375–80.

## ಸಂಯುಕ್ತ ಸಹಕಾರಿಯ ವಿಭಾಗೀಯ ಕಛೇರಿಗೆ ಒಳಾಂಗಣ ವಿನ್ಯಾಸಕ್ಕಾಗಿ (Interior Decorator) ಟೆಂಡರ್

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ 1ನೇ ಬ್ಲಾಕ್ ರಾಜಾಜಿನಗರ, ಬೆಂಗಳೂರಿನಲ್ಲಿರುವ 800 ಚದರ ಅಡಿ ಕಛೇರಿಯ ಒಳಾಂಗಣ ವಿನ್ಯಾಸ (Interior Decoration), ಪೀಠೋಪಕರಣ, ನೆಟ್‌ವರ್ಕಿಂಗ್ & ಎಲೆಕ್ಟ್ರಿಕಲ್ ಕೆಲಸಗಳಿಗಾಗಿ (On Turkey Basis) ಗುತ್ತಿಗೆದಾರರಿಂದ ವಿವರವಾದ ದರದ ಟೆಂಡರ್‌ಗಳನ್ನು ಆಹ್ವಾನಿಸಿದ್ದು, ದಿನಾಂಕ 14.03.2015 ಸಂಜೆ 5.30ರೊಳಗಾಗಿ ಸಲ್ಲಿಸಲು ಕೋರಿದೆ.

ಕಟ್ಟಡದ ವಿವರಗಳ ಬಗ್ಗೆ ಕಛೇರಿಯ ಅವಧಿಯಲ್ಲಿ ಬೆಂಗಳೂರು ವಿಭಾಗೀಯ ಅಧಿಕಾರಿ ಶ್ರೀಮತಿ ಕೃತಿ ಜನಾರ್ಧನ್–8884466708 / ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀ ರಘುನಂದನ್ ಕೆ.–8884466707 ಇವರನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ.

# HIGHLIGHTS OF THE PROPOSED AMENDMENTS RELATING DIRECT TAXES APPLICABLE TO CO-OPERATIVES- BUDGET 2015



## ಕೇಂದ್ರ ಆಯವ್ಯಯ 2015 – 16

ಕೇಂದ್ರ ವಿತ್ತ ಸಚಿವ ಶ್ರೀ ಅರುಣ ಜೆಟ್ಲಿಯವರು ಮಂಡಿಸಿದ ಆಯವ್ಯಯ 2015ರಲ್ಲಿ ಸಹಕಾರ ಬ್ಯಾಂಕುಗಳು ಹಾಗೂ ಕ್ರೆಡಿಟ್ ಸಹಕಾರ ಸಂಸ್ಥೆಗಳಿಗೆ ಸಂಬಂದಿಸಿದಂತೆ ಪ್ರಸ್ತಾಪಿಸಿರುವ ಟಿ.ಡಿ.ಎಸ್. ಮತ್ತು ಆದಾಯ ತೆರಿಗೆ ಪ್ರಮಾಣ ಮತ್ತು ಸಹಕಾರ ಸಂಸ್ಥೆಗಳಿಗೆ ನೇರವಾಗಿ ಸಂಬಂಧಿಸಿದ ಹಲವಾರು ವಿಷಯಗಳನ್ನು ಆಯವ್ಯಯದಲ್ಲಿ ಪ್ರಸ್ತಾಪಿಸದಿರುವ ಬಗ್ಗೆ ಶ್ರೀ ಮಧುಕರ ಹೆಗಡೆ ಚಾರ್ಟರ್ಡ್ ಅಕೌಂಟೆಂಟ್ ಬೆಂಗಳೂರು ಇವರು ಲೇಖನ ರೂಪದಲ್ಲಿ ವಿಶ್ಲೇಷಣೆ ಮಾಡಿರುವುದನ್ನು ಸಹಕಾರ ಬ್ಯಾಂಕುಗಳ ಹಾಗೂ ಸಹಕಾರಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ.

– ಸಂಪಾದಕರು

The finance minister while presenting the budget for the 2015 on 28.02.2015 has clarified issues with regard to TDS applicable to co-operative banks and societies. The following is the extract of the amendment proposed for Section 194A of the Income Tax, 1961.

**1. Rationalisation of provisions relating to deduction of tax on interest (other than interest on securities)**

Section 194A(1) read with section 194A(3)(i) of the Act provide for deduction of tax on interest (other than interest on securities) over a specified threshold, i.e. Rs.10,000 for interest payment by banks, co-operative society engaged in banking business (co-operative bank) and post office and Rs.5,000 for payment of interest by other persons. Further, sub-section (3) of section 194A inter alia also provides for exemption from deduction of tax in respect of following interest payments by co-operative society:

(i) Interest payment by a co-operative society to a member thereof or any other co-operative society. [Section 194A(3)(v) of the Act]

(ii) Interest payments on deposits by a primary agricultural credit society or primary credit society or co-operative land mortgage bank or co-operative land development bank. [Section 194A(3)(viia)(a) of the Act]

(iii) Interest payment on deposits other than time deposit by a co-operative society engaged in the business of banking other than those mentioned in section 194A(3)(viia)(a) of the Act. [Section 194A(3)(viia)(b) of the Act]

Therefore, as per the provisions of section 194A(1) read with provisions of sections 194A(3)(i)(b) and 194A(3)(viia)(b), co-operative bank is required to deduct tax from interest payment on time deposits if the amount of such payment exceeds specified threshold of Rs. 10,000/-. However, as the provisions of section 194A(3)(v) of the Act provide a general exemption from making tax deduction from payment of interest by all co-operative societies to its members, the co-operative banks tried to avail this exemption by making their depositors as members of different categories. This has led to dispute as to whether

the co-operative banks, for which the specific provisions of tax deduction exist in the form of section 194A (1), section 194A(3)(i)(b) and section 194A(3)(viia)(b) of the Act, can take the benefit of general exemption provided to all co-operative societies from deduction of tax on payment of interest to members.

The matter has been carried to judicial forums and in some cases a view has been taken that the provisions of section 194A(3)(viia)(b) of the Act makes no distinction between members and non-members of co-operative banks for the purposes of deduction of tax, hence, the co-operative banks are required to deduct tax on payment of interest on time deposit and cannot avoid the same by taking the plea of the general exemption provided under section 194A(3)(v) of the Act.

This is because the specific provision of tax deduction provided under section 194A(3)(i)(b) and 194A(3)(viia)(b) of the Act for co-operative banks override the general exemption provided to all co-operative societies for non-deduction of tax from interest payment to members under section 194A(3)(v) of the Act.

As there is no difference in the functioning of the co-operative banks and other commercial banks, the Finance Act, 2006 and Finance Act, 2007 amended the provisions of the Act to provide for co-operative banks a taxation regime which is similar to that for the other commercial banks.

Therefore, there is no rationale for treating the co-operative banks differently from other commercial banks in the matter of deduction of tax and allowing them to avail the exemption meant for smaller credit co-operative societies formed for the benefit of small number of members. However, as mentioned earlier, a doubt has been created regarding the applicability of the specific provisions mandating deduction of tax from the payment of interest on time deposits by the co-operative banks to its members by claiming that general exemption provided is also applicable for payment of interest to member depositors.

In view of this, it is proposed to amend the provisions of the section 194A of the Act to expressly provide from the prospective date of 1st June, 2015 that the exemption provided from deduction of tax from payment of interest to members by a co-operative society under section 194A(3)(v) ) of the Act shall not apply to the payment of interest on time deposits by the co-operative banks to its members.

However, the existing exemption provided under section 194A(3)(viia)(a) of the Act to primary agricultural credit society or a primary credit society or a co-operative land mortgage bank or a co-operative land development bank from deduction of tax in respect of interest paid on deposit shall continue to apply.

Therefore, these co-operative credit societies/ banks referred to in said clause (viia)(a) would not be required to deduct tax on interest payment to depositors even after the proposed amendment. Further, the existing exemption provided under section 194A(3)(v) of the Act from deduction of tax from interest paid by a co¬operative society to another co-operative society shall continue to apply to the co-operative bank and, therefore, a

co-operative bank shall not be required to deduct tax from the payment of interest on time deposit to a depositor, being a co-operative society.

The existing provision of TDS on payment of interest by banking company or co-operative bank applies only to the interest payment on time deposits made on or after the 1st day of July, 1995. The definition of "time deposits" provided in the section 194A of the Act excludes recurring deposit from its scope. Therefore, payment of interest on recurring deposits by banking company or co-operative bank is currently not subject to TDS.

The recurring deposit is also made for a fixed tenure and, therefore, the same is akin to time deposit. It is, therefore, proposed to amend the definition of 'time deposits' so as to include recurring deposits within its scope for the purposes of deduction of tax under section 194A of the Act. However, the existing threshold limit of Rs 10,000 for non-deduction of tax shall also be applicable in case of interest payment on recurring deposits to safeguard interests of small depositors.

Currently, provisions of proviso to section 194A(3)(i) of the Act provide that the interest income for the purpose of deduction of tax by the banking company or the co-operative bank or the public company shall be computed with reference to a branch of these entities. As currently, most of these entities are computerised and follow core banking solutions for crediting interest, there is no rationale for continuing branch wise calculation of interest by the entities who have adopted core banking solutions. It is, therefore, proposed to amend the provisions of section 194A of the Act to provide that the computation of interest income for the purposes of deduction of tax under section 194A of the Act should be made with reference to the income credited or paid by the banking company or the co-operative bank or the public company which has adopted core banking solutions.

**Highlights of the above provisions :**

**a) The benefit of exemption from TDS u/s 194A(3)(v) is not applicable to co-operative banks and hence co-operative banks are liable to deduct tax at source (TDS) from 01.06.2015 if interest paid to depositors including members if interest exceeds Rs.10000/- in a year.**

**b) The definition of term deposit has been amended to include Recurring Deposit and hence TDS u/s 194A is applicable on RDs from 01.06.2015 if the interest payment exceeds Rs.10000/- in a year.**

**c) Computation of income for TDS u/s 194A should be made with reference to bank as a whole and not branch wise. If aggregate interest payment by all branches exceeds Rs.10000/- to a depositor TDS needs to be made.**

**d) TDS is not applicable to the interest paid by co-operative banks to co-operative societies even if it exceeds Rs.10000/- in a year.**

**e) Co-operative societies need not deduct tax at source (TDS) on the interest paid to members as per section 194A(3)(v) of the Income Tax Act, 1961.**

## 2. Rate of Income-tax :

There is no change in the rate of tax. The income tax rate is as follows:

In the case of every co-operative society, -

Rates of income-tax

| | | |
|---|---|---|
| (1) | where the total income does not exceed Rs. 10,000 | 10 per cent. of the total income; |
| (2) | where the total income exceeds Rs. 10,000 but does not exceed Rs. 20,000 | Rs. 1,000 plus 20 per cent. of the amount by which the total income exceeds Rs. 10,000; |
| (3) | where the total income exceeds Rs. 20,000 | Rs. 3,000 plus 30 per cent. of the amount by which the total income exceeds Rs. 20,000. |

Surcharge on income-tax

The amount of income-tax computed in accordance with the preceding provisions of this Paragraph, or the provision of section 111A or section 112 of the Income-tax Act, shall, in the case of every co-operative society, having a total income exceeding one crore rupees, be increased by a surcharge for the purposes of the Union calculated at the rate of twelve per cent of such income-tax:

Provided that in the case of every co-operative society mentioned above having total income exceeding one crore rupees, the total amount payable as income-tax and surcharge on such income shall not exceed the total amount payable as income-tax on a total income of one crore rupees by more than the amount of income that exceeds one crore rupees.

### Highlights of the above provisions :

**a) The co-operative banks and societies (other than credit) are liable to pay surcharge at the rate of 12% if the income after deduction exceeds Rupees One Crore.**

**b) The effective rate of tax in the specified category mentioned above goes up from existing 30.9% to 34.61% (34.608%)**

## 3. Issues not clarified :

The following issues have not been addressed by the Finance Minister in the budget :

**a) Category of members eligible to get exemption from TDS u/s 194A(3)(v) of the Income Tax Act, 1961.**

**b) The litigation with regard to Section 80P(4) of the Income Tax Act, 1961 inserted by the Finance Bill 2006 has not been addressed and disallowabilty u/s 80P(2)(a)(i) may still continue for credit co-operatives/societies.**

**c) No clarification given with regard to the interest received by co-operative societies from co-operative banks as to whether same is allowable as deduction u/s 80P(2)(d) as the assessing officers are demanding tax on that.**

**For any clarification contact :**
**CA.Madhukar Hegde**
Ph: 9448151454
E-mail: hegdemadhu1@gmail.com

# ಶಾಖೆಗಳ ಉದ್ಘಾಟನೆ



ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ-ಆಪರೇಟಿವ್ ಲಿ., ಕೋಲಾರ ಸಹಕಾರಿಯ 21ನೇ ಶಾಖೆಯು ಶಿವಮೊಗ್ಗ ನಗರದಲ್ಲಿ ಉದ್ಘಾಟನೆ. ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯರು ಹಾಗೂ ರಾಜ್ಯ ಬಿಜೆಪಿ ಉಪಾಧ್ಯಕ್ಷರಾದ ಶ್ರೀ ಭಾನುಪ್ರಕಾಶ್, ಜಿಲ್ಲಾ ಬಿಜೆಪಿ ಅಧ್ಯಕ್ಷರಾದ ಶ್ರೀ ದತ್ತಾತ್ರೇಯ, ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ರವಿಕುಮಾರ್ ಹೆಚ್.ವಿ.ರವರು ಉಪಸ್ಥಿತರಿದ್ದರು.



ಶ್ರೀ ಶಿವಶಕ್ತಿ ಸೌಹಾರ್ದ ಪತ್ತಿನ ಸಹಕಾರಿ ನಿ., ಬಾಗಲಕೋಟೆ ಸಹಕಾರಿಯ ಮಹಾಲಿಂಗಪುರ ಶಾಖೆಯ ಉದ್ಘಾಟನೆ.



ಶ್ರೀ ಸಂಕಮ್ಮತಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬಾರಕೂರು ಸಹಕಾರಿಯ ಪ್ರಥಮ ಶಾಖೆಯನ್ನು ಬ್ರಹ್ಮಾವರದಲ್ಲಿ ಹಿರಿಯ ಸಹಕಾರಿ ಧುರೀಣರಾದ ಶ್ರೀ ವಿಠಲ್ ಎಸ್. ಹೆಗ್ಡೆರವರಿಂದ ಉದ್ಘಾಟನೆ.



ಶ್ರೀ ಸಂಜೀವಿನಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೀಡಿ ಸಹಕಾರಿಯ ಪ್ರಥಮ ಶಾಖೆಯನ್ನು ಹಂಡಿಬಡಗನಾಥ ಕುಂಬಾರ್ಡ ಶ್ರೀ ಶ್ರೀ ಶ್ರೀ ಸುಖದೇವನಾಥಜಿ ರವರಿಂದ ಉದ್ಘಾಟನೆ. ಖಾನಾಪುರದ ಶಾಸಕರಾದ ಶ್ರೀ ಅರವಿಂದ ಪಾಟೀಲ, ಖಾನಾಪುರದ ಮಾಜಿ ನಗರ ಅಧ್ಯಕ್ಷರಾದ ಶ್ರೀ ಸಿದ್ದೋಜಿ ನಾ. ಗಾವಡೆ, ಸಹಕಾರಿಯ ಅಧ್ಯಕ್ಷರು, ನಿರ್ದೇಶಕರು ಉಪಸ್ಥಿತರಿದ್ದರು.

## ಇ-ಸ್ಟ್ಯಾಂಪಿಂಗ್ ಕೇಂದ್ರದ ಉದ್ಘಾಟನೆ

ಶ್ರೀ ಸುವರ್ಣಗಿರಿ ಸೌಹಾರ್ದ ಪತ್ತಿನ ಸಹಕಾರಿ ನಿ., ಕನಕಗಿರಿ ಸಹಕಾರಿಯ ಇ-ಸ್ಟ್ಯಾಂಪಿಂಗ್ ಕೇಂದ್ರವನ್ನು ಕನಕಗಿರಿಯ ವಿರಕ್ತಮಠದ ಶ್ರೀಗಳಾದ ಡಾ. ಚನ್ನಮಲ್ಲಸ್ವಾಮೀಜಿಗಳಿಂದ ಉದ್ಘಾಟನೆ. ಈ ಸಂದರ್ಭಲ್ಲಿ ಜಿಲ್ಲಾ ಪಂಚಾಯತ್ ಸದಸ್ಯರಾದ ಶ್ರೀ ವೀರೇಶ ಸಮಗಂಡಿ, ಸಹಕಾರಿಯ ಅಧ್ಯಕ್ಷರು, ನಿರ್ದೇಶಕರು, ವ್ಯವಸ್ಥಾಪಕರು, ಸಿಬ್ಬಂದಿ ವರ್ಗ ಹಾಗೂ ಊರಿನ ಮುಖಂಡರು ಉಪಸ್ಥಿತರಿದ್ದರು.



## ಸ್ವಚ್ಛತಾ ಸಪ್ತಾಹ ಆಚರಣೆ




ಹಂಸ ಚೈತನ್ಯ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಉಡುಪಿ ಸಹಕಾರಿಯಲ್ಲಿ ಸ್ವಚ್ಛತಾ ಸಪ್ತಾಹದ ಆಚರಣೆ. ಸಹಕಾರಿಯ ವತಿಯಿಂದ ಸರಕಾರಿ ಪದವಿ ಪೂರ್ವ ಕಾಲೇಜು, ಹಿರಿಯಡಕಗೆ ಕಸದ ಬುಟ್ಟಿಗಳ ವಿತರಣೆ.



ಕವಾಡ ಗಂಗಾಮಾತಾ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಕನಕನಾಳ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ ಹಾಗೂ ಸ್ವಚ್ಛತಾ ಕಾರ್ಯಕ್ರಮ.



ಶ್ರೀ ಕಾಮಧೇನು ಮಹಿಳಾ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಮುನವಳ್ಳಿ ಸಹಕಾರಿಯ ಸ್ವಚ್ಛತಾ ಸಪ್ತಾಹದ ಆಚರಣೆ.

## ಸಿಕೋಪ ಮೇಳ – 2015



ಕೈಗಾರಿಕಾ ಸಹಕಾರ ಸಂಘಗಳ ಉತ್ಪಾದಕರು ಮತ್ತು ಕರಕುಶಲ ಕರ್ಮಿಗಳ ಕೇಂದ್ರ (ಸಿಕೋಪ) ವತಿಯಿಂದ ಸಿಕೋಪ ಮೇಳ–2015ನ್ನು ದಿನಾಂಕ : 13.02.2015 ರಿಂದ 15.02.2015ರ ವರೆಗೆ ಪ್ರಾದೇಶಿಕ ಸಹಕಾರಿ ನಿರ್ವಹಣಾ ಸಂಸ್ಥೆ ಆವರಣ, ಪದ್ಮನಾಭನಗರ, ಬೆಂಗಳೂರಿನಲ್ಲಿ ಆಯೋಜಿಸಲಾಗಿತ್ತು. ಸಂಯುಕ್ತ ಸಹಕಾರಿಯಿಂದ ಈ ಕಾರ್ಯಕ್ರಮದ ವ್ಯವಸ್ಥೆಗೆ ಸಹಕರಿಸಲಾಗಿತ್ತು.

## ಶಿವಶ್ರೀ ಸಹಕಾರಿಯ ಚಿಟ್ಸ್ ಯೋಜನೆಗೆ ಚಾಲನೆ



ಶಿವಶ್ರೀ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ತುಮಕೂರು ಸಹಕಾರಿಯ ಶಿವಶ್ರೀ ಚಿಟ್ಸ್ ಯೋಜನೆಯನ್ನು ಸಿದ್ಧಗಂಗಾ ಮಠಾಧ್ಯಕ್ಷರಾದ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳ ಅಮೃತ ಹಸ್ತದಿಂದ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ.ಹೆಚ್.ಪರಮಶಿವಯ್ಯ ಹಾಗೂ ಸಹಕಾರಿಯ ನಿರ್ದೇಶಕರು ಉಪಸ್ಥಿತರಿದ್ದರು.

## ಸಹಕಾರಿಗೆ ಭೇಟಿ



ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಂಗಳೂರು ಸಹಕಾರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ, ನಿರ್ದೇಶಕರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಹಾಗೂ ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀ ರಘುನಂದನ್ ಕೆ. ರವರಿಂದ ಭೇಟಿ. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಲಿ ಸದಸ್ಯರು ಉಪಸ್ಥಿತರಿದ್ದರು.

ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ-ಆಪರೇಟಿವ್ ಲಿ., ಕೋಲಾರ ಸಹಕಾರಿಯ ಸಹಕಾರ ನಗರ ಶಾಖೆಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ ಹಾಗೂ ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀ ರಘುನಂದನ್ ಕೆ. ರವರಿಂದ ಭೇಟಿ. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಹಾಗೂ ಆಡಳಿತ ಮಂಡಲಿ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



## ಬೆಲ್ಲದ-ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ.,ಆಡಳಿತ ಮಂಡಳಿಗೆ ಅವಿರೋಧ ಆಯ್ಕೆ



ಶ್ರೀ ಸದಾಶಿವ ಚಂದ್ರಶೇಖರ ಕತ್ತಿ
ಅಧ್ಯಕ್ಷರು



ಶ್ರೀ ಮಹಾವೀರ ಪಾರೇಸಪ್ಪಾ ಖೆಮಲಾಪುರೆ, ಉಪಾಧ್ಯಕ್ಷರು

**ನಿರ್ದೇಶಕರು** : ಶ್ರೀ ಮಲ್ಲಿಕಾರ್ಜುನ ಸಂ. ಬೆಲ್ಲದ, ಶ್ರೀ ರಮೇಶ ಬಂ. ಮುನ್ನೋಳಿ, ಡಾ. ಮೋಹನ ಸ. ಮುನ್ನೋಳಿ, ಶ್ರೀ ಕುಶ ರ. ಕತ್ತಿ, ಶ್ರೀ ರಾಜಾರಾಮ ತು. ಶಿರಾಳಕರ, ಶ್ರೀ ಮುರಗೇಶ ಬ. ಕತ್ತಿ, ಶ್ರೀ ಸಿದ್ಧಪ್ಪಾ ವೀ. ಹಾಗರಗಿ, ಶ್ರೀ ಎಸ್. ಎಸ್. ಪಾಟೀಲ (ಸಂಕೇಶ್ವರ), ಶ್ರೀ ಸುರೇಶ ಬ. ಬೆಲ್ಲದ (ಕಬ್ಬೂರ), ಶ್ರೀ ಶಮಸುದ್ದಿನ ದ. ಪಠಾಣ, ಶ್ರೀಮತಿ ವಿಜಯಲಕ್ಷ್ಮೀ ಶಿ. ಶೆಟ್ಟಿ, ಶ್ರೀಮತಿ ಸಂಜೀವಿನಿ ಶ್ರೀ. ತೇರದಾಳ, ಶ್ರೀ ಮನೋಹರ ನಾ. ಶ್ರೀಖಂಡೆ.

## ಏಪ್ರಿಲ್ ಮಾಹೆಯ ತರಬೇತಿ ಕಾರ್ಯಕ್ರಮಗಳು

ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ ಎರಡು ದಿನಗಳ "ಆಡಳಿತ ಪರಿಣಿತಿ ತರಬೇತಿ" ಕಾರ್ಯಕ್ರಮವನ್ನು ಏಪ್ರಿಲ್ 2015ರ ಮೂರನೇ ವಾರದಲ್ಲಿ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ, ಬೆಂಗಳೂರು ಇಲ್ಲಿ ಹಮ್ಮಿಕೊಳ್ಳಲಾಗುವುದು. ಪ್ರವೇಶ ಶುಲ್ಕ ತಲಾ ರೂ.1,000/-. ತಮ್ಮ ವಿವರಗಳನ್ನು ಕಳುಹಿಸಿ ನೋಂದಾಯಿಸಿಕೊಳ್ಳಲು ತಿಳಿಸಿದೆ.

## ಆಯ್ಕೆ ಹಾಗೂ ಅಭಿನಂದನೆ



ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಲ್.ಎಸ್.ಆನಂದ್‌ರವರು ಬಳ್ಳಾರಿ ಜಿಲ್ಲೆಯ ಪ್ರತಿಷ್ಠಿತ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಅಮರಾವತಿ ಇದರ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಸಂಯುಕ್ತ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಲಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಅವರಿಗೆ ಅಭಿನಂದನೆಯನ್ನು ಸಲ್ಲಿಸಿದ್ದಾರೆ.

# Joint Liability Groups
# SF, MF, Tenant Farmers, Oral Lessees, Share Croppers
# Micro entrepreneurs / Artisans in Non-Farm Sector

Y.V.Gundurao, NABARD, Karnataka Regional Office

**Joint Liability Groups**

**Access to credit for SF and MF**

According to Karnataka Crop Insurance Study conducted by World Bank

| Source of Loan | MAR. Farmer | Small Farmer |
|---|---|---|
| Commercial Banks and RRBs | 27.10% | 31.35% |
| Cooperatives | 9.95% | 13.99% |
| SHG | 13.41% | 3.94% |
| Friends/ Relatives/ Money Lenders | 40.30% | 35.20% |
| Shop | 7.04% | 5.03% |
| Chit Fund | 2.20% | 10.49% |
| Total loans from formal sources | 50.47% | 49.28% |
| Total loans from informal sources | 49.53% | 50.72% |

**Why JLG?**

- Bank finance not reaching SF/MF/Tenant farmers for lack of clear title to Agriculture land/other collaterals.
- To minimise the risks in the loan portfolio for the banks through group approach, cluster approach, peer education and credit discipline.
- GoI Budget announcement in 2014-15 regarding financing 5 lakh JLGs.

**Objectives – Farm Sector**

- Augment flow of credit to mid- segment clients taking up farm activities.
- Bring more areas under cultivation
- enhance productivity
- increase production
- Food security
- Livelihood promotion

**Objectives – Non-Farm Sector**

- Augment flow of credit to Micro-entrepreneurs/ artisans/ individuals in non-farm sectors
- To serve as collateral substitute for loans to be provided to the target group
- To build mutual trust /confidence between bank and target group
- Livelihood promotion to vulnerable section

**General Features**

- Informal group of 4-10 individuals
- Avail bank loan on individual basis or through group mechanism
- Mutual guarantee
- Similar economic activity
- Joint undertaking to the bank
- Expected to support each other

**Criteria for Membership**

- Similar socio-economic status
- Residing in same area
- Defaulters debarred
- Only one person from same family
- Should know and trust each other

**Group approach**

- Selection of effective leader
- Regular meetings
- Principles of self-help
- All to be active

**What next ?**

- Conduit for technology transfer
- Market information
- Training and assessing input/raw material require-ments
- JLGs of specific activity can be federated at block level
- After stabilisation, cluster federations or producers' companies

**Who can form JLGs**

- Big Farmers
- Agriculture Technology Management Agency (ATMA)
- Non-Governmental Organisations
- Bank Branches, PACS, Govt. Depts.,
- Farmers clubs, Farmers Associations
- Govt. Depts., MFI/MFOs,
- Panchayat Raj Institutions
- KVKs, Agriculture Universities
- Individuals, Input Dealers, Document Writers in Coops

**Savings**

- Encourage to save regularly
- Banks may open SB a/cs

- Quantum of loans on the basis of need and not linked to thrift

**Benefits of JLGs to Members**

- Issue of security resolved – Joint Liability Agreement and Peer pressure
- Availability of adequate and timely credit leading to higher income
- Farm inputs in time
- Benefits of scale in farm operations like purchase of inputs, processing, marketing
- Increase in production/ productivity leading to positive impact on GDP

**Benefits of JLGs to Banks**

- Promotes Financial Inclusion
- Enhancement of Business
- Reduction of transaction cost.
- Better Recovery
- Credit plus services to increase income levels.
- Address the issue of staff shortage
- Outsourcing of banks business without cost

**JLG MODELS**

**Model A – financing individuals in JLG**

- KCC/SCC to each member
- Assess credit requirement
- Members jointly execute loan document
- Member opting out of group or joining group will need new loan agreement
- Mutual agreement needs consensus about amount of individual debt liability
- Each jointly and severally liable for all loans taken by all members belonging to a group

**Model B – financing JLG as a group**

- Group functions as one borrowing unit
- One loan comibining credit need of all members
- Credit need to be assessed on the basis of available cultivable area of each member and activity to be taken up
- Members jointly execute loan document
- Mutual agreement needs consensus
- Any change in membership lead to new document

**Credit appraisal**

- Thorough credit appraisal to avoid over/under financing
- RoI, margin on security, documentation, coverage under crop insurance, PAIS, as per regular norms
- Flexible credit product to address crop production, marketing and investment credit, other productive purposes in agri & allied sector

**Monitoring and review**

- All members liable in case of default
- Peer pressure in utilisation and repayment
- Half-yearly progress report in prescribed format to RBI & NABARD
- Banks may evolve MIS
- Harmonious relation and continuous contact

**Incentive for promotion from NABARD**

- For Banks - grant for formation, nurturing and financing @ Rs.2000/- per JLG over 3 years
- For other institutions - Rs.2000/- per JLG over 3 years
- First instalment – Rs.1000/- after sanction of bank loan
- II and III instalments – at the end of II & III year after prompt repayment by all members of group

**Capacity building**

- Banks to take up training for stakeholders
- Awareness and sensitisation of JLG concepts for staff and target group
- NABARD to conduct capacity building programmes of Bank staff, publicity measures such as pamphlets, leaflets, use of media, etc.

**NABARD refinance**

100% refinance assistance to all Banks for their lending to JLGs

**Broad list of items to be seen during field visit or interaction with members**

- How are the groups formed? What were the motivational factors?
- How long the groups have been functioning?
- How many members are there?
- Activities pursued by the group members – FS/NFS
- How often the group meets? How the meetings are conducted?
- Whether members do voluntary savings? Whether the members have opened individual bank accounts with bank branch – type of accounts.
- What is the extent of bank loan? How does the group disburses loan out of this – Model A or Model B?
- What is the collateral security, if any, taken?
- Rate of interest charged by the bank? Repayment period, how fixed?
- What is the recovery performance? How does the group tackle the non-repayment of loans by members?
- Who decides the purpose of the loan? Is there a system of grace period? System of taking subsequent loans?
- What are the benefits as being members?
- Bank loan is a CC or Term loan? How the limit is fixed by the bank?
- Whether members are aware of rate of interest charged by the bank, distinguishing features of CC and TL?
- Documentation
- Role of NGO/JLPI, providing training and coordinating activities, if any.
- KYC issues

■

# ಸೌಹಾರ್ದ ಸಹಕಾರಿ ಚಳುವಳಿಯ ಪ್ರಸಕ್ತ ವಿದ್ಯಮಾನಗಳು



ಶ್ರೀ ಸಿ.ಎನ್.ಪರಶಿವಮೂರ್ತಿ, ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ)

ಕರ್ನಾಟಕ ಸರ್ಕಾರ, ಕೇಂದ್ರ ಸರ್ಕಾರವು ರವಾನಿಸಿದ ಮಾದರಿ ಸಹಕಾರ ಸಂಘಗಳ ಕಾಯಿದೆಯನ್ನು ರವಾನಿಸಿ, ಈ ಸಂಸ್ಥೆಗಳನ್ನು ಸರ್ಕಾರದ ನಿಯಂತ್ರಣದಿಂದ ಮುಕ್ತಗೊಳಿಸಿ, ಅವುಗಳನ್ನು ಸ್ವತಂತ್ರ ಮತ್ತು ಸ್ವಾಯತ್ತ ಸಂಸ್ಥೆಗಳು ಎಂದು ಸೂಚನೆ ನೀಡಿದಾಗ, ಬಹಳಷ್ಟು ಚರ್ಚೆ, ವಿಮರ್ಶೆ ಮತ್ತು ಸಭೆಗಳನ್ನು ಅಧಿಕಾರಿ ಮತ್ತು ಅಧಿಕಾರೇತರ ಜೊತೆ ನಡೆಸಿ, ಒಂದು ಸಹಕಾರ ನೀತಿಯನ್ನು ರೂಪಿಸಿದ ಪ್ರಥಮ ರಾಜ್ಯ ಸರ್ಕಾರ, ಕರ್ನಾಟಕ ರಾಜ್ಯ.

ಈ ನೀತಿಯನ್ನು ರೂಪಿಸುವ ಪೂರ್ವದಲ್ಲಿ ಸರ್ಕಾರ ಒಂದು ಅಧಿಕಾರಿಗಳ ಸಮಿತಿ ರಚಿಸಿ, ಅದರ ವರದಿಯನ್ನು ನಿಬಂಧಕರ ಕಛೇರಿಯಲ್ಲಿ ಮತ್ತು ಸರ್ಕಾರದ ಮಟ್ಟದಲ್ಲಿ ಚರ್ಚಿಸಿ, ವಿಮರ್ಶಿಸಿ, ಸರ್ಕಾರದ ಸಂಪುಟ ಸಭೆಯಲ್ಲಿ ಒಪ್ಪಿಗೆ ಪಡೆದು, ಈ ಸಹಕಾರ ನೀತಿಯನ್ನು ರೂಪಿಸಿತು. ಈ ನೀತಿಯಲ್ಲಿ ಪ್ರಮುಖವಾದ ಅಂಶಗಳು

1. ಈಗಾಗಲೇ ಜಾರಿಯಲ್ಲಿರುವ ಸಹಕಾರ ಸಂಘಗಳ ಕಾಯಿದೆ 1959ಕ್ಕೆ ತಿದ್ದುಪಡಿ ತಂದು, ಸರ್ಕಾರದ/ ನಿಬಂಧಕರ ಅಧಿಕಾರಗಳನ್ನು ಕಡಿತಗೊಳಿಸುವುದು.
2. 1959ರ ಕಾಯಿದೆಗೆ ಪೂರಕವಾಗಿ ಸೌಹಾರ್ದ ಕಾಯಿದೆಯನ್ನು ರೂಪಿಸಿ ನಿಬಂಧಕರ ಎಲ್ಲಾ ಅಧಿಕಾರಗಳನ್ನು ಪ್ರಜಾಪ್ರಭುತ್ವದಡಿ ರಚನೆಯಾದ ಒಂದು ಸಂಸ್ಥೆಯನ್ನು ಕಾಯಿದೆಯಲ್ಲಿಯೇ ಹುಟ್ಟುಹಾಕಿ, ಅದಕ್ಕೆ ನಿಬಂಧಕರ ಅಧಿಕಾರ ನೀಡುವುದು.
3. ನಿಬಂಧಕರು ಮಧ್ಯಪ್ರವೇಶ ಮಡುವ ಅವಕಾಶಗಳನ್ನು ಸೀಮಿತಗೊಳಿಸಿ, ಸಂಸ್ಥೆಯನ್ನು ಹುಟ್ಟುಹಾಕುವುದು ಮತ್ತು ಸಮಾಪನೆಗೊಳಿಸುವುದು ಮಾತ್ರ ನಿಬಂಧಕರ ವ್ಯಾಪ್ತಿಯಲ್ಲಿರ ಬೇಕೆಂಬ ತಾತ್ವಿಕ ತೀರ್ಮಾನ ತೆಗೆದುಕೊಳ್ಳಲಾಯಿತು. ಏಕೆಂದರೆ, ಅಂತಹ ತೀರ್ಮಾನ ತೆಗೆದುಕೊಳ್ಳಲು ಕಾಯಿದೆಯಲ್ಲಿ ಒಂದು ಪ್ರಾಧಿಕಾರ ಇರಬೇಕು ಎಂಬ ಕಾರಣದಿಂದ.
4. ಇದರ ಜೊತೆಗೆ 1959ರ ಕಾಯಿದೆಯಲ್ಲಿ ನೋಂದಾವಣೆಯಾದ ಸಹಕಾರ ಸಂಘಗಳು ಸೌಹಾರ್ದ ಕಾಯಿದೆ ವರ್ಗಾವಣೆ ಹೊಂದಲು ಮತ್ತು ಸರ್ಕಾರದ ಯಾವುದೇ ರೀತಿಯ ಪ್ರತ್ಯಕ್ಷ, ಪರೋಕ್ಷ ಸಹಾಯ ಪಡೆಯದೆ, ಸ್ವತಂತ್ರ ಮತ್ತು ಸ್ವಾಯತ್ತ ಸಂಸ್ಥೆಗಳಾಗಿ ಕೆಲಸ ನಿರ್ವಹಿಸಲು ಅನುವು ಮಾಡಿಕೊಳ್ಳುವುದು.

ಈ ಮೇಲ್ಕಂಡ ಉದ್ದೇಶದಿಂದ ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ 1997ನ್ನು ರಚಿಸಿ ಉಭಯ ಸದನಗಳ ಒಪ್ಪಿಗೆ ಪಡೆಯಲಾಯಿತು. ಈ ಕಾಯಿದೆಯ ಉದ್ದೇಶಗಳನ್ನು ಈ ಕೆಳಕಂಡಂತೆ ತಿಳಿಸಿದೆ.

"ಸದಸ್ಯರೇ ಸಂಪೂರ್ಣ ಒಡೆತನ ಹೊಂದಿರುವ, ನಿರ್ವಹಿಸುವ ಮತ್ತು ನಿಯಂತ್ರಿಸುವ ಸ್ವಸಹಾಯ ಮತ್ತು ಪರಸ್ಪರ ನೆರವಿನ ಮೇಲೆ ಆಧಾರಿತವಾದ ಸಹಕಾರಿ ತತ್ವಗಳಿಂದ ಮಾರ್ಗದರ್ಶನ ಪಡೆದ, ಜವಾಬ್ದಾರಿಯುತ, ಸ್ಪರ್ಧಾತ್ಮಕ, ಸ್ವಾವಲಂಬಿ ಆರ್ಥಿಕ ಉದ್ಯಮಗಳಾಗಿ ಸಹಕಾರಿಗಳಿಗೆ ಮಾನ್ಯತೆ ಮತ್ತು ಅವುಗಳ ಸ್ವಯಂ ರಚನೆಗೆ ಪ್ರೋತ್ಸಾಹ ನೀಡುವುದು"

**ಈ ಮೇಲ್ಕಂಡ ಆಶಯಗಳನ್ನು ಈಡೇರಿಸಲು ನಿಬಂಧಕರ ಕರ್ತವ್ಯ, ಜವಾಬ್ದಾರಿಗಳನ್ನು ಈ ಕೆಳಕಂಡಂತೆ ಸೀಮಿತಗೊಳಿಸಲಾಯಿತು.**

1. ಸಹಕಾರಿಗಳನ್ನು ಶಾಸನಬದ್ಧ ಸಂಸ್ಥೆಯಾಗಿ ನೋಂದಾಯಿಸುವುದು.
2. ಸಹಕಾರಿಗಳನ್ನು ಏರ್ಪಡುವ/ ನಿರ್ಮಾಣವಾಗುವ ವಿವಾದಗಳ ಇತ್ಯರ್ಥ.
3. ಸಹಕಾರಿ ಕಾರ್ಯನಿರ್ವಹಿಸಲು ನಿಷ್ಕ್ರಿಯಗೊಂಡಾಗ, ಅವುಗಳನ್ನು ಸಮಾಪನೆ ಮಾಡುವ ಪ್ರಕ್ರಿಯೆ.

ಈ ಕರ್ತವ್ಯಗಳ ಜೊತೆ 2004ರಲ್ಲಿ ಸೌಹಾರ್ದ ಕಾಯಿದೆಗೆ ತಿದ್ದುಪಡಿ ಮುಖಾಂತರ.

1. ಸಹಕಾರಿಗಳು ನಡೆಸುವ ವ್ಯವಹಾರ ಸಮರ್ಪಕವಾಗಿಲ್ಲದಿದ್ದರೆ ವಿಚಾರಣೆ.
2. ಸಹಕಾರಿಗಳು ಆಡಳಿತ ಮಂಡಲಿಗೆ ಚುನಾವಣೆ ನಡೆಸಲು ಚುನಾವಣಾಧಿಕಾರಿ ನೇಮಕ ಮಾಡಲು.

ನಿಬಂಧಕರಿಗೆ ಹೆಚ್ಚುವರಿ ಕೆಲಸ ವರ್ಗಾಯಿಸಲಾಯಿತು. ಈ ರೀತಿ ಮಾರ್ಪಾಡು ಮಾಡುವಾಗ ಸಂಯುಕ್ತ ಸಹಕಾರಿಗೆ ಇದ್ದ ಕೆಲವು ಆಡಳಿತಾತ್ಮಕ ಮತ್ತು ಅನುಭವದ ಕೊರತೆಯಿಂದ ವರ್ಗಾಯಿಸಲಾಯಿತೆಂದು ಭಾವಿಸಬಹುದು.

ಈ ಮೇಲ್ಕಂಡ ಅಧಿಕಾರ ಮತ್ತು ಜವಾಬ್ದಾರಿಯನ್ನು ಹೊರತು ಪಡಿಸಿ, ಕಾಯಿದೆಯಲ್ಲಿಯೇ ಒಂದು ಸಂಸ್ಥೆಯನ್ನು "ಸಂಯುಕ್ತ ಸಹಕಾರಿ" ಸೃಷ್ಟಿ ಮಾಡಲಾಯಿತು. ಇದಕ್ಕೆ ಕಾಯಿದೆ ಕಲಂ 53ರಲ್ಲಿ ರಚನೆ, ಪ್ರಕಾರ್ಯಗಳು ಮತ್ತು ನಿರ್ವಹಣೆಯನ್ನು

ನಿಗದಿಪಡಿಸಲಾಯಿತು.

ಈ ಪ್ರಕಾರ್ಯಗಳಲ್ಲಿ ನಿಬಂಧಕರು ನಿರ್ವಹಿಸುವ (1959ರ ಕಾಯಿದೆಯಲ್ಲಿ) ಎಲ್ಲಾ ಕೆಲಸಗಳನ್ನು ಸಂಯುಕ್ತ ಸಹಕಾರಿಗೆ ನಿಗದಿಪಡಿಸಲಾಗಿದೆ.

**ಇವುಗಳಲ್ಲಿ ಪ್ರಮುಖವಾದವು**

1. ಸಹಕಾರಿಗಳನ್ನು ಪ್ರವರ್ತಿಸುವುದು, ಸಂಘಟಿಸುವುದು ಮತ್ತು ಮಾದರಿ ಉಪನಿಯಮಗಳನ್ನು ರಚಿಸುವುದು.
2. ಸಂಶೋಧನೆ ಮತ್ತು ಮೌಲ್ಯಮಾಪನ.
3. ಸಹಕಾರಿಗಳಿಗೆ ನೀತಿ ಸಂಹಿತೆ ರೂಪಿಸುವುದು.
4. ಆರ್ಥಿಕ ಸಬಲತೆ ಮಾನದಂಡಗಳನ್ನು ರಚಿಸುವುದು.
5. ಸಹಕಾರಿ ಶಿಕ್ಷಣ ನಿಧಿ ನಿರ್ವಹಿಸುವುದು.
6. ಸದಸ್ಯ ಸಹಕಾರಿಗಳ ಲೆಕ್ಕಪರಿಶೋಧನೆ, ಚುನಾವಣೆ, ಸಾಮಾನ್ಯ ಸಭೆ ನಡೆಸುವುದನ್ನು ಖಚಿತಪಡಿಸಿಕೊಳ್ಳುವುದು.
7. ಲೆಕ್ಕಪರಿಶೋಧಕರ ನೇಮಕಕ್ಕೆ ಕ್ರಮವಿಡುವುದು.
8. ಸದಸ್ಯ ಸಹಕಾರಿಗಳ ಪರಿವೀಕ್ಷಣೆ.
9. ಸಹಕಾರಿ ಆಡಳಿತ ಮಂಡಲಿ ರದ್ದು ಮಾಡಿ ಆಡಳಿತಾಧಿಕಾರಿ ನೇಮಿಸುವುದು.
10. ಮತ್ತಿತರೆ.

ಸೌಹಾರ್ದ ಕಾಯಿದೆಯ ಮತ್ತೊಂದು ವೈಶಿಷ್ಟ್ಯವೆಂದರೆ ನಿಗದಿಪಡಿಸಿದ ಕೆಲಸ ನಿರ್ವಹಣೆ. ಉದಾಹರಣೆಗೆ

1. ವಾರ್ಷಿಕ ಮಹಾಸಭೆಯನ್ನು ಸೆಪ್ಟೆಂಬರ್ ಅಂತ್ಯಕ್ಕೆ ಕರೆಯತಕ್ಕದ್ದು.
2. ಪ್ರತಿ ವರ್ಷ, ಲೆಕ್ಕಪತ್ರಗಳ ತಪಾಸಣೆಯಾದ ವರದಿಯನ್ನು ಮಹಾಸಭೆಯಲ್ಲಿ ಮಂಡಿಸುವುದು.
3. ಆರ್ಥಿಕ ತಃಖ್ತೆಗಳನ್ನು ಸಹಕಾರಿ ವರ್ಷ ಮುಗಿದ ಒಂದು ತಿಂಗಳೊಳಗಾಗಿ ತಯಾರಿಸುವುದು. ಇತ್ಯಾದಿ

ಅಂದರೆ ಸೌಹಾರ್ದ ಕಾಯಿದೆಯಲ್ಲಿ ಸ್ವಾಯತ್ತ, ಸ್ವತಂತ್ರ ಸಂಸ್ಥೆಗಳೆಂದು ಗುರುತಿಸಿದರೂ, ಜವಾಬ್ದಾರಿಯುತ ಆಡಳಿತ ಮಂಡಲಿ ಮತ್ತು ನೌಕರರು ಕರ್ತವ್ಯ ನಿರ್ವಹಿಸಲು ಜವಾಬ್ದಾರಿಯನ್ನು ಸ್ಪಷ್ಟವಾಗಿ ನಿಗದಿಪಡಿಸಲಾಗಿದೆ.

ಈ ಮೇಲ್ಕಂಡ ಅಂಶಗಳನ್ನು ಗಮನಿಸಿದಾಗ, ನಾವು ಗಮನಿಸಬೇಕಾದ ಪ್ರಮುಖ ಅಂಶ ಸಹಕಾರಿಗಳನ್ನು ನಡೆಸಿಕೊಂಡು ಹೋಗುವ, ಆಡಳಿತ ಮಂಡಲಿ ಮತ್ತು ಸಂಯುಕ್ತ ಸಹಕಾರಿಯ ನಿರ್ದೇಶಕ ಮಂಡಲಿ ಸದಸ್ಯರು ಮೇಲ್ಕಂಡ ಜವಾಬ್ದಾರಿಗಳನ್ನು ನಿರ್ವಹಿಸಲು ಸಬಲರೇ? ಹಾಗೂ ಅವರ ತಿಳುವಳಿಕೆ ಮಟ್ಟ ಎಷ್ಟು ಉನ್ನತ ಮಟ್ಟದಲ್ಲಿ ಇದೆ ಎಂಬುದು ಮುಖ್ಯ.

ನಿಬಂಧಕರು ಮತ್ತು ಅವರ ಸಹಾಯಕರಿಗೆ ಶಾಸನಬದ್ಧ ಕೆಲಸ ನಿರ್ವಹಿಸಲು ಅವರು ಸೇವೆಗೆ ಸೇರಿದ ದಿನಾಂಕದಿಂದ ತರಬೇತಿ ನೀಡಲಾಗುತ್ತದೆ ಮತ್ತು ಅವರು ನಿರ್ವಹಿಸುವ ದಿನನಿತ್ಯದ ಕೆಲಸ ಅದೇ ಆಗಿರುತ್ತದೆ. ಅಧಿಕಾರಿಗಳು ತಾವು ನಿರ್ವಹಿಸುವ ಕೆಲಸದಲ್ಲಿ ಒತ್ತಡಗಳು, ಪ್ರಭಾವ, ನ್ಯಾಯಾಲಯದ ನಿರ್ದೇಶನಗಳು, ಆದೇಶಗಳನ್ನು ದಿನನಿತ್ಯ ಅಭ್ಯಾಸ ಮಾಡುತ್ತಾರೆ. ಇದರ ಜೊತೆಗೆ ಅವರು ಕೆಲಸ ನಿರ್ವಹಿಸುವಲ್ಲಿ ಕರ್ತವ್ಯಚ್ಯುತಿ ಮಾಡಿದರೆ, ಅದನ್ನು ಅಶಿಸ್ತು ಎಂದು ಕ್ರಮ ಜರುಗಿಸಲು ಸರ್ಕಾರಕ್ಕೆ ಪೂರ್ಣ ಪ್ರಮಾಣದ ಅಧಿಕಾರ ಇದೆ. ಆದರೆ ಸಂಯುಕ್ತ ಸಹಕಾರಿಯ ನಿರ್ದೇಶಕರು ತಮ್ಮ ಸಹಕಾರಿಯ ನಿರ್ವಹಣೆಯಲ್ಲಿ, ಅಂದರೆ ಸಭೆಯಲ್ಲಿ ಹಾಜರಾಗುವುದು ತಿಂಗಳಿಗೊಮ್ಮೆ. ಅಷ್ಟರಲ್ಲಿ ಅನುಭವ ಸಾಕೇ? ನಿರ್ದೇಶಕರುಗಳು, ನ್ಯಾಯಾಲಯದ ತೀರ್ಪುಗಳು ಮತ್ತು ಆದೇಶಗಳನ್ನು ಓದಲು ಆಸಕ್ತಿ, ಸಮಯ, ಸಂಯಮ, ವಿವೇಚನೆ ಇದೆಯೇ ಎಂಬುದು ಮುಖ್ಯ. ಸಹಕಾರ ಇಲಾಖಾಧಿಕಾರಿಗಳು ಪ್ರಾರಂಭದಿಂದಲೇ ಈ ಕೆಲಸ ನಿರ್ವಹಿಸುತ್ತಿರುವುದರಿಂದ, ಈ ಎಲ್ಲಾ ತೊಡಕುಗಳನ್ನು ನಿರ್ವಹಿಸಲು ಸಮರ್ಥರಿರುತ್ತಾರೆ.

ಆದರೆ ಐದು ವರ್ಷ ಅವಧಿಗೆ ನಿರ್ದೇಶಕನಾಗಿ ಆಯ್ಕೆಯಾದ ಒಬ್ಬ ಸಹಕಾರಿ ನಿರ್ದೇಶಕರಿಗೆ ಈ ಎಲ್ಲ ಕೆಲಸ/ ಕರ್ತವ್ಯ/ ಜವಾಬ್ದಾರಿ ನಿರ್ವಹಿಸಲು ಸಾಧ್ಯವೇ?

ಇದಕ್ಕೆ ನಾವು ಪರಾಮರ್ಶಿಸಬೇಕಾದ ವಿಷಯ ಯಾವುದು – ಜವಾಬ್ದಾರಿಯುತ ನಿರ್ದೇಶಕರು, ಜವಾಬ್ದಾರಿ ನಿರ್ವಹಿಸದಿದ್ದರೆ, ಅವರ ಬಗ್ಗೆ ತೆಗೆದುಕೊಳ್ಳಬಹುದಾದ ಕ್ರಮಗಳೇನು?

ಸಂಯುಕ್ತ ಸಹಕಾರಿ ಅಥವಾ ಸಹಕಾರಿಯ ಆಡಳಿತ ಮಂಡಲಿಯನ್ನು ರದ್ದುಪಡಿಸಿ ಆಡಳಿತಾಧಿಕಾರಿ ನೇಮಿಸುವುದು. ಅಂದರೆ ಜವಾಬ್ದಾರಿ ನಿರ್ವಹಿಸದೇ ಇದ್ದಂತಹ ನಿರ್ದೇಶಕರ ಮೇಲೆ ಮತ್ತಾವುದೇ ಕ್ರಮ ಜರುಗಿಸಲಾಗದು.

ಜವಾಬ್ದಾರಿಯುತರನ್ನಾಗಿ ಮಾಡಲು ಸಂಯುಕ್ತ ಸಹಕಾರಿ ಮಾಡಬೇಕಾದ ಕೆಲಸವೇನು?

1. ಆಡಳಿತ ಮಂಡಲಿ ಚುನಾವಣೆ ಐದು ವರ್ಷಕ್ಕೊಮ್ಮೆ ನಡೆಯುತ್ತದೆ. ಸ್ಪರ್ಧಿಸಬಯಸುವ ಅಭ್ಯರ್ಥಿಗಳಿಗೆ ಪೂರ್ವಭಾವಿ ಯಾಗಿ ಒಂದು ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳುವುದು – ಇದು 2–3 ದಿವಸ ಇರಬಹುದು ಅಥವಾ ಒಂದೇ ದಿವಸ ಇರಬಹುದು. ಈ ತರಬೇತಿಯಲ್ಲಿ ಸಂಯುಕ್ತ ಸಹಕಾರಿ ನಿರ್ವಹಿಸಬೇಕಾದ ಕರ್ತವ್ಯ, ಹಕ್ಕು ಮತ್ತು ಜವಾಬ್ದಾರಿಗಳು ಮತ್ತು ಸಹಕಾರಿ ಕಾನೂನಿನ ಬಗ್ಗೆ ಅದರಲ್ಲೂ ಪ್ರಮುಖವಾಗಿ ಅರೆನ್ಯಾಯಿಕ ಅಧಿಕಾರಗಳನ್ನು ಚಲಾಯಿಸುವಾಗ ಅನುಸರಿಸಬೇಕಾದ ನೀತಿ ನಿಯಮಗಳು,

ಸ್ವಾಭಾವಿಕ ನ್ಯಾಯತತ್ವಗಳು, ದಾಖಲೆ ಮತ್ತು ಸಾಕ್ಷಿಗಳ ಹೇಳಿಕೆಗಳನ್ನು ತುಲನಾತ್ಮಕವಾಗಿ ವಿಮರ್ಶೆ ಮಾಡುವ/ ಗ್ರಹಿಸುವ ಬಗ್ಗೆ ತರಬೇತಿ ವ್ಯವಸ್ಥೆ ಮಾಡಬಹುದು.

2. ನಿರ್ದೇಶಕನಾಗಿ ಆಯ್ಕೆಯಾದ ನಂತರ ಕನಿಷ್ಠ ಒಂದು ವಾರದ ತರಬೇತಿ ವ್ಯವಸ್ಥೆ ಮಾಡಬೇಕು. ಈ ಅವಧಿಯಲ್ಲಿ ಈಗ ಸಹಕಾರಿ ನೌಕರರಿಗೆ 10 ದಿನಗಳ ಕಾರ್ಯಕ್ರಮ ರೂಪಿಸಿದಂತೆ ಪ್ರಮುಖವಾಗಿ ನ್ಯಾಯಿಕ ವ್ಯವಸ್ಥೆ ಬಗ್ಗೆ ತರಬೇತಿ ನೀಡಬೇಕು.
3. ಈ ತರಬೇತಿಯನ್ನು ನಿರ್ದೇಶಕನಾಗಿ ಮುಂದುವರಿಯಲು ಒಂದು ಅವಶ್ಯಕ ಅರ್ಹತೆ ಎಂದು ನಿಗದಿಪಡಿಸುವುದು. ಇದನ್ನು ನೀತಿ ಸಂಹಿತೆಯಲ್ಲಿ ಒಂದು ಪ್ರಮುಖ ಅಂಶವಾಗಿ ಸೇರಿಸುವುದು.
4. ಈ ಅವಕಾಶಗಳನ್ನು ಉಪಯೋಗಿಸದ ನಿರ್ದೇಶಕನನ್ನು ನೀತಿ ಸಂಹಿತೆ ಉಲ್ಲಂಘನೆಗಾಗಿ ಶಿಸ್ತು ಕ್ರಮ ಜರುಗಿಸಲು ಸಂಯುಕ್ತ ಸಹಕಾರಿ ನೀತಿ ರೂಪಿಸುವುದು.

**ಈಗಿನ ವಿದ್ಯಮಾನಗಳು :** ಈಗ ನಿರ್ದೇಶಕನಾಗಿ ಆಯ್ಕೆಯಾಗುವ ವ್ಯಕ್ತಿಗೆ ಯಾವುದೇ ನ್ಯಾಯಿಕ ವ್ಯವಸ್ಥೆ, ನೀತಿ ನಿಯಮಗಳ ಬಗ್ಗೆ ತಿಳುವಳಿಕೆ ಇದೆ ಎಂದು ಅರ್ಥೈಸಬಾರದು. ಕಾನೂನು ಪದವೀಧರರಿದ್ದರೂ ಅವರಿಗೂ ಸಹಕಾರಿ ಕಾನೂನು, ಸಹಕಾರಿ ನೀತಿ ಮತ್ತು ಸಹಕಾರಿ ತತ್ವಗಳ ಬಗ್ಗೆ ತಿಳುವಳಿಕೆ ಅವಶ್ಯಕ.

ಮೇಲೆ ಹೇಳಿದಂತೆ, ನಿಬಂಧಕರು ಮತ್ತು ಅವರ ಸಹಾಯಕರಿಗೆ ಪ್ರಾರಂಭದಿಂದಲೇ ತರಬೇತಿ, ದಿನನಿತ್ಯ ವ್ಯವಹರಣೆಯಲ್ಲಿ ಅನುಭವ ಇರುವಂತೆ, ಚುನಾಯಿತ ಪ್ರತಿನಿಧಿಗಳಿಗೆ, ಪಾರದರ್ಶಕ ನೀತಿ ಅನುಸರಿಸಲು, ವೃತ್ತಿಪರ ತೀರ್ಮಾನ ತೆಗೆದುಕೊಳ್ಳಲು, ಅನುವು ಮಾಡಿಕೊಡುವುದು ಸಂಯುಕ್ತ ಸಹಕಾರಿಯ ಪ್ರಮುಖ ಜವಾಬ್ದಾರಿಯಾಗಿರಬೇಕು.

ಪ್ರಜಾಪ್ರಭುತ್ವದಡಿ ರಚನೆಯಾದ ಸಂಸ್ಥೆಗಳಲ್ಲಿ ಪಕ್ಷ ರಾಜಕೀಯ ಅಥವಾ ಗುಂಪು ರಾಜಕೀಯ ಇರುವುದು ಸಾಮಾನ್ಯ. ಉದಾಹರಣೆಗೆ ಭಾರತ ಸರ್ಕಾರದಲ್ಲಿ ಚುನಾವಣೆ ನಂತರ, ಯಾವ ರಾಜ್ಯಗಳಲ್ಲಿ ವಿರೋಧ ಪಕ್ಷದ ಸರ್ಕಾರ ರಚನೆಯಾಗಿದೆಯೋ ಅಂತಹ ರಾಜ್ಯಗಳಲ್ಲಿ ರಾಷ್ಟ್ರಪತಿ ಆಡಳಿತ ಹೇರುವ ಪ್ರವೃತ್ತಿ ಇದೆ. ಇದನ್ನು ಆಗಿಂದಾಗ್ಗೆ ಉಪಯೋಗಿಸಲಾಗುತ್ತದೆ. ಇದಕ್ಕೆ ಪೂರ್ವದಲ್ಲಿ ಸಂಪುಟದ ರಾಜಕೀಯ ಸಮಿತಿ ಪರಿಶೀಲಿಸಿ ಸಚಿವ ಸಂಪುಟಕ್ಕೆ ಶಿಫಾರಸ್ಸು ಮಡುತ್ತದೆ. ಆದರೆ ಪ್ರತಿಯೊಂದು ಪ್ರಸಂಗದಲ್ಲಿ ಕಾನೂನು ಪಂಡಿತರಿಂದ ಮತ್ತು ಕಾನೂನು ಇಲಾಖೆಯಿಂದ ಸಲಹೆ, ಸೂಚನೆ ಮತ್ತು ಅಭಿಪ್ರಾಯವನ್ನು ಪಡೆದು ಪರಿಶೀಲಿಸಿ ತೀರ್ಮಾನ ತೆಗೆದುಕೊಳ್ಳುತ್ತಾರೆ.

ಆದರೆ ಸಂಯುಕ್ತ ಸಹಕಾರಿಯಲ್ಲಿ ಒಂದು ಸದಸ್ಯ ಸಹಕಾರಿ ಸಮಿತಿ ರದ್ದುಪಡಿಸುವಾಗ ಈ ರೀತಿ ಸಲಹೆ ಸೂಚನೆ ಲಭ್ಯವಿರುವುದಿಲ್ಲ.

**ಜವಾಬ್ದಾರಿಯುತರನ್ನಾಗಿ ಮಾಡಲು ಸಂಯುಕ್ತ ಸಹಕಾರಿ ಮಾಡಬೇಕಾದ ಕೆಲಸವೇನು?**

1. ಆಡಳಿತ ಮಂಡಲಿ ಚುನಾವಣೆ ಐದು ವರ್ಷಕ್ಕೊಮ್ಮೆ ನಡೆಯುತ್ತದೆ. ಸ್ಪರ್ಧಿಸಬಯಸುವ ಅಭ್ಯರ್ಥಿಗಳಿಗೆ ಪೂರ್ವಭಾವಿಯಾಗಿ ಒಂದು ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳುವುದು – ಇದು 2–3 ದಿವಸ ಇರಬಹುದು ಅಥವಾ ಒಂದೇ ದಿವಸ ಇರಬಹುದು. ಈ ತರಬೇತಿಯಲ್ಲಿ ಸಂಯುಕ್ತ ಸಹಕಾರಿ ನಿರ್ವಹಿಸಬೇಕಾದ ಕರ್ತವ್ಯ, ಹಕ್ಕು ಮತ್ತು ಜವಾಬ್ದಾರಿಗಳು ಮತ್ತು ಸಹಕಾರಿ ಕಾನೂನಿನ ಬಗ್ಗೆ ಅದರಲ್ಲೂ ಪ್ರಮುಖವಾಗಿ ಅರೆನ್ಯಾಯಿಕ ಅಧಿಕಾರಗಳನ್ನು ಚಲಾಯಿಸುವಾಗ ಅನುಸರಿಸಬೇಕಾದ ನೀತಿ ನಿಯಮಗಳು, ಸ್ವಾಭಾವಿಕ ನ್ಯಾಯತತ್ವಗಳು, ದಾಖಲೆ ಮತ್ತು ಸಾಕ್ಷಿಗಳ ಹೇಳಿಕೆಗಳನ್ನು ತುಲನಾತ್ಮಕವಾಗಿ ವಿಮರ್ಶೆ ಮಾಡುವ/ ಗ್ರಹಿಸುವ ಬಗ್ಗೆ ತರಬೇತಿ ವ್ಯವಸ್ಥೆ ಮಾಡಬಹುದು.
2. ನಿರ್ದೇಶಕನಾಗಿ ಆಯ್ಕೆಯಾದ ನಂತರ ಕನಿಷ್ಠ ಒಂದು ವಾರದ ತರಬೇತಿ ವ್ಯವಸ್ಥೆ ಮಾಡಬೇಕು. ಈ ಅವಧಿಯಲ್ಲಿ ಈಗ ಸಹಕಾರಿ ನೌಕರರಿಗೆ 10 ದಿನಗಳ ಕಾರ್ಯಕ್ರಮ ರೂಪಿಸಿದಂತೆ ಪ್ರಮುಖವಾಗಿ ನ್ಯಾಯಿಕ ವ್ಯವಸ್ಥೆ ಬಗ್ಗೆ ತರಬೇತಿ ನೀಡಬೇಕು.
3. ಈ ತರಬೇತಿಯನ್ನು ನಿರ್ದೇಶಕನಾಗಿ ಮುಂದುವರಿಯಲು ಒಂದು ಅವಶ್ಯಕ ಅರ್ಹತೆ ಎಂದು ನಿಗದಿಪಡಿಸುವುದು. ಇದನ್ನು ನೀತಿ ಸಂಹಿತೆಯಲ್ಲಿ ಒಂದು ಪ್ರಮುಖ ಅಂಶವಾಗಿ ಸೇರಿಸುವುದು.
4. ಈ ಅವಕಾಶಗಳನ್ನು ಉಪಯೋಗಿಸದ ನಿರ್ದೇಶಕನನ್ನು ನೀತಿ ಸಂಹಿತೆ ಉಲ್ಲಂಘನೆಗಾಗಿ ಶಿಸ್ತು ಕ್ರಮ ಜರುಗಿಸಲು ಸಂಯುಕ್ತ ಸಹಕಾರಿ ನೀತಿ ರೂಪಿಸುವುದು.

**ಈಗಿನ ವಿದ್ಯಮಾನಗಳು :** ಈಗ ನಿರ್ದೇಶಕನಾಗಿ ಆಯ್ಕೆಯಾಗುವ ವ್ಯಕ್ತಿಗೆ ಯಾವುದೇ ನ್ಯಾಯಿಕ ವ್ಯವಸ್ಥೆ, ನೀತಿ ನಿಯಮಗಳ ಬಗ್ಗೆ ತಿಳುವಳಿಕೆ ಇದೆ ಎಂದು ಅರ್ಥೈಸಬಾರದು. ಕಾನೂನು ಪದವೀಧರರಿದ್ದರೂ ಅವರಿಗೂ ಸಹಕಾರಿ ಕಾನೂನು, ಸಹಕಾರಿ ನೀತಿ ಮತ್ತು ಸಹಕಾರಿ ತತ್ವಗಳ ಬಗ್ಗೆ ತಿಳುವಳಿಕೆ ಅವಶ್ಯಕ.

ಮೇಲೆ ಹೇಳಿದಂತೆ, ನಿಬಂಧಕರು ಮತ್ತು ಅವರ ಸಹಾಯಕರಿಗೆ ಪ್ರಾರಂಭದಿಂದಲೇ ತರಬೇತಿ, ದಿನನಿತ್ಯ ವ್ಯವಹರಣೆಯಲ್ಲಿ ಅನುಭವ ಇರುವಂತೆ, ಚುನಾಯಿತ ಪ್ರತಿನಿಧಿಗಳಿಗೆ, ಪಾರದರ್ಶಕ ನೀತಿ ಅನುಸರಿಸಲು, ವೃತ್ತಿಪರ ತೀರ್ಮಾನ ತೆಗೆದುಕೊಳ್ಳಲು,

ಅನುವು ಮಾಡಿಕೊಡುವುದು ಸಂಯುಕ್ತ ಸಹಕಾರಿಯ ಪ್ರಮುಖ ಜವಾಬ್ದಾರಿಯಾಗಿರಬೇಕು.

ಪ್ರಜಾಪ್ರಭುತ್ವದಡಿ ರಚನೆಯಾದ ಸಂಸ್ಥೆಗಳಲ್ಲಿ ಪಕ್ಷ ರಾಜಕೀಯ ಅಥವಾ ಗುಂಪು ರಾಜಕೀಯ ಇರುವುದು ಸಾಮಾನ್ಯ. ಉದಾಹರಣೆಗೆ ಭಾರತ ಸರ್ಕಾರದಲ್ಲಿ ಚುನಾವಣೆ ನಂತರ, ಯಾವ ರಾಜ್ಯಗಳಲ್ಲಿ ವಿರೋಧ ಪಕ್ಷದ ಸರ್ಕಾರ ರಚನೆಯಾಗಿದೆಯೋ ಅಂತಹ ರಾಜ್ಯಗಳಲ್ಲಿ ರಾಷ್ಟ್ರಪತಿ ಆಡಳಿತ ಹೇರುವ ಪ್ರವೃತ್ತಿ ಇದೆ. ಇದನ್ನು ಆಗಿಂದಾಗ್ಗೆ ಉಪಯೋಗಿಸಲಾಗುತ್ತದೆ. ಇದಕ್ಕೆ ಪೂರ್ವದಲ್ಲಿ ಸಂಪುಟದ ರಾಜಕೀಯ ಸಮಿತಿ ಪರಿಶೀಲಿಸಿ ಸಚಿವ ಸಂಪುಟಕ್ಕೆ ಶಿಫಾರಸ್ಸು ಮಡುತ್ತದೆ. ಆದರೆ ಪ್ರತಿಯೊಂದು ಪ್ರಸಂಗದಲ್ಲಿ ಕಾನೂನು ಪಂಡಿತರಿಂದ ಮತ್ತು ಕಾನೂನು ಇಲಾಖೆಯಿಂದ ಸಲಹೆ, ಸೂಚನೆ ಮತ್ತು ಅಭಿಪ್ರಾಯವನ್ನು ಪಡೆದು ಪರಿಶೀಲಿಸಿ ತೀರ್ಮಾನ ತೆಗೆದುಕೊಳ್ಳುತ್ತಾರೆ.

ಆದರೆ ಸಂಯುಕ್ತ ಸಹಕಾರಿಯಲ್ಲಿ ಒಂದು ಸದಸ್ಯ ಸಹಕಾರಿ ಸಮಿತಿ ರದ್ದುಪಡಿಸುವಾಗ ಈ ರೀತಿ ಸಲಹೆ ಸೂಚನೆ ಲಭ್ಯವಿರುವುದಿಲ್ಲ. ಇದರಿಂದ ಸಂಯುಕ್ತ ಸಹಕಾರಿ ತೆಗೆದುಕೊಳ್ಳುವ ತೀರ್ಮಾನಗಳು ಏಕಪಕ್ಷೀಯವಾಗಿರಬಹುದು ಮತ್ತು ಬಹುಮತ, ಒಂದು ಗುಂಪಿನ/ ಪಕ್ಷದ ನೀತಿಯಂತೆ ತೀರ್ಮಾನ ಮಾಡಬಹುದು, ಅಥವಾ ಪ್ರಭಾವಿ ನಿರ್ದೇಶಕರು ತಮ್ಮ ಅಭಿಪ್ರಾಯವನ್ನು ಬೇರೆ ನಿರ್ದೇಶಕರ ಮೇಲೆ ಪ್ರಭಾವ ಬೀರಬಹುದು – ಇದು ಸಹಕಾರಿ ಆಂದೋಲನಕ್ಕೆ ಪೂರಕವಾಗಿರಬೇಕಿಲ್ಲ.

ಸ್ವಾಯತ್ತತೆ ಮತ್ತು ಸ್ವೇಚ್ಛತೆಗೆ ವ್ಯತ್ಯಾಸವನ್ನು ವಿಂಗಡಿಸುವ ವ್ಯವದಾನ ಸಂಯುಕ್ತ ಸಹಕಾರಿಗೆ ಇಲ್ಲದೇ ಹೋಗಬಹುದು. ಇದನ್ನು ಮತ್ತೊಂದು ಉದಾಹರಣೆಯೆಂದು ಸ್ಪಷ್ಟೀಕರಿಸಬಹುದು.

ಸೌಹಾರ್ದ ಕಾಯಿದೆ ಕಲಂ 54 (2) ರಲ್ಲಿ ಸಂಯುಕ್ತ ಸಹಕಾರಿ ಮಂಡಲಿ ರಚನೆ ಬಗ್ಗೆ ತಿಳಿಸಿದೆ. ಅದು ಈ ಕೆಳಕಂಡಂತೆ ಇದೆ.

"ಮೊದಲನೆಯ ಮಂಡಲಿಯನ್ನು ಹೊರತುಪಡಿಸಿ, ಸಂಯುಕ್ತ ಸಹಕಾರಿಯ ಮಂಡಲಿಯಲ್ಲಿ ರಾಜ್ಯದ ಪ್ರತಿಯೊಂದು ರೆವಿನ್ಯೂ ಜಿಲ್ಲೆಯಿಂದ ಒಬ್ಬ ಪ್ರತಿನಿಧಿ ಇರತಕ್ಕದ್ದು. ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಜಿಲ್ಲೆಯಲ್ಲಿ ಸಹಕಾರಿಗಳು ನೋಂದಾಯಿತವಾಗಿರದಿದ್ದರೆ ಅಥವಾ ನಿರ್ದೇಶಕರಾಗಿ ಚುನಾಯಿತ ರಾಗಲು ಅರ್ಹ ವ್ಯಕ್ತಿಗಳಿಲ್ಲದಿದ್ದರೆ ಅಂಥ ಜಿಲ್ಲೆಗೆ ಪ್ರಾತಿನಿಧ್ಯ ನೀಡತಕ್ಕದ್ದಲ್ಲ."

ಈ ಅವಕಾಶವನ್ನು ಸಂಯುಕ್ತ ಸಹಕಾರಿ ಉಪನಿಯಮಗಳಿಗೆ ತಿದ್ದುಪಡಿ ತಂದು ರಾಜ್ಯದ ಎಲ್ಲಾ ಸಹಕಾರಿಗಳೂ ಒಂದು ಗುಂಪು ಎಂದು ಮಾಡಿ, ಎಲ್ಲಾ ಸದಸ್ಯರೂ ಮತ ಹಾಕಲು ತಿದ್ದುಪಡಿ ತಂದಿರುವುದು ಸ್ವೇಚ್ಛತೆ ಎಂದು ಗುರುತಿಸಬಹುದು. ಜಿಲ್ಲೆಗೆ ಒಬ್ಬ ಪ್ರತಿನಿಧಿ ಎಂದು ಕಾಯಿದೆ ಸೂಚಿಸಿದರೆ, ಆ ಜಿಲ್ಲೆಯ ಸಹಕಾರಿಗಳು ಸೇರಿ ಒಬ್ಬ ಪ್ರತಿನಿಧಿ ಆಯ್ಕೆ ಮಾಡಬೇಕು. ಏಕೆಂದರೆ ಆ ಜಿಲ್ಲೆಯಲ್ಲಿರುವ ಸಹಕಾರಿಗಳು, ಅವರದೇ ಆದ ತೊಡಕು, ತೊಂದರೆಗಳಿಗೆ ಸ್ಪಂಧಿಸಲು, ಅವರ ಮಧ್ಯೆ ಇರುವ ನಿರ್ದೇಶಕರೇ ಇರಬೇಕು. ಜಿಲ್ಲೆಗೊಬ್ಬ ಪ್ರತಿನಿಧಿ ಇರಬೇಕೆಂದು ಕಾನೂನಿನಲ್ಲಿ ಸ್ಪಷ್ಟಪಡಿಸಿದೆ ಹಾಗೂ ಬೀದರ್ ಜಿಲ್ಲೆಯ ಒಂದು ಸಹಕಾರಿ ಮೈಸೂರು ಜಿಲ್ಲೆಯ ಪ್ರತಿನಿಧಿಯನ್ನು ಆಯ್ಕೆ ಮಾಡಬೇಕಾದರೆ, ಅಂತಹ ಸಹಕಾರಿ ನಿರ್ದೇಶಕನಾಗಲು ಅರ್ಹನೇ ಇಲ್ಲವೇ ಎಂಬ ಮಾಹಿತಿ ಇರುವುದಿಲ್ಲ. ಅದಕ್ಕಾಗಿಯೇ ಪ್ರತಿ ಜಿಲ್ಲೆಯ ಸಹಕಾರಿಗಳು ಕೂಡಿ, ಆ ಜಿಲ್ಲೆಯ ಪ್ರತಿನಿಧಿಯನ್ನು ಆಯ್ಕೆ ಮಾಡುವುದೇ ಕಾನೂನಿನ ಆಶಯ.

ಈ ತಿದ್ದುಪಡಿಯಿಂದ ಸಂಯುಕ್ತ ಸಹಕಾರಿ ನಿರ್ದೇಶಕ ಮಂಡಲಿ ತನ್ನ ನಿರ್ದೇಶಕರಿಗೆ ಅನುಕೂಲ ಕಲ್ಪಿಸಲು ಮಾಡಿಕೊಂಡ ತಿದ್ದುಪಡಿ – ಇದರಿಂದ ಜಿಲ್ಲಾ ಮಟ್ಟದ ಸಹಕಾರಿಗಳ ಅಭಿವೃದ್ಧಿಗೆ ಪೂರಕವಾಗಿಲ್ಲ.

ಸಂಯುಕ್ತ ಸಹಕಾರಿ ಒಂದು ಮಾದರಿ ಸಂಸ್ಥೆಯಾಗಿ ಸದಸ್ಯ ಸಹಕಾರಿಗಳಿಗೆ ಮಾದರಿಯಾಗಿರಬೇಕು. ಇದೇ ರೀತಿ ನಿರ್ದೇಶಕ ಮಂಡಲಿ ಸದಸ್ಯರ ಸೇವೇ ಉಚಿತವಾಗಿರಬೇಕು ಎಂದು ಸಹಕಾರ ತತ್ವ ಮತ್ತು ನೀತಿ. ಆದರೂ ಇತ್ತೀಚಿನ ವರ್ಷಗಳಲ್ಲಿ, ಉಚಿತ ಪದವನ್ನು ತೆಗೆದುಹಾಕಿದ್ದು, ನಿರ್ದೇಶಕರಾಗಿ ಅವರ ಕಾರ್ಯ ನಿರ್ವಹಿಸಲು ಆಗುವ ಖರ್ಚುವೆಚ್ಚಗಳನ್ನು ಭರಿಸಬಹುದು ಎಂಬ ನೀತಿ ಅನುಸರಿಲಾಗಿದೆ. ಇದರ ಅರ್ಥವೇನೆಂದರೆ, ನಿರ್ದೇಶಕರು ಸಭೆಗಳಿಗೆ ಹಾಜರಾಗಲು ಬಂದಾಗ, ಅವರು ತಮ್ಮ ಹಣ ಖರ್ಚು ಮಾಡುವ ಅವಶ್ಯಕತೆ ಇಲ್ಲ ಎಂಬ ಭಾವನೆಯಿಂದ. ಆದರೆ ಇದನ್ನು ಒಂದು ಲಾಭದಾಯಕ ಭತ್ಯೆ ಎಂದು ಪಡೆಯಬಾರದು. ಇದಕ್ಕೆ ಮತ್ತೊಂದು ಉದಾಹರಣೆ ಕೊಡುವುದಾದರೆ, 1959ರ ಕಾಯಿದೆಯಲ್ಲಿ ಒಬ್ಬ ರಾಜ್ಯ ಮಟ್ಟದ ಸಂಸ್ಥೆಯ ಅಧ್ಯಕ್ಷರು ಕೇಂದ್ರಸ್ಥಾನದ ಮೂರು ರಾಜ್ಯಮಟ್ಟದ ಸಂಸ್ಥೆಗಳಲ್ಲಿಯ ನಿರ್ದೇಶಕರಿದ್ದು, ಪ್ರತಿಸಭೆಗೆ ಹಾಜರಾದಾಗಲೂ ಅವರು ಜಿಲ್ಲಾ ಸ್ಥಾನದಿಂದ ಬಂದು ಹಾಜರಾಗಿದ್ದಾರೆಂದು ಭತ್ಯೆ ಪಡೆಯುತ್ತಿದ್ದರು, ಆದರೆ ಅವರು ಪ್ರವಾಸವನ್ನೇ ಮಾಡುತ್ತಿರಲಿಲ್ಲ ಮತ್ತು ಬಸ್ಸಿನಲ್ಲಿ ಪ್ರಯಾಣ ಮಾಡಿ ಕಾರಿನಲ್ಲಿ ಬಂದೆನೆಂದು ಪ್ರಯಾಣ ಭತ್ಯೆ ಪಡೆಯುತ್ತಿದ್ದರು. ಯಾರು ವಾಹನ ತಾರದೆ ಭತ್ಯೆ ಪಡೆಯಬಾರದೆಂದು ನೀತಿ ರೂಪಿಸಿತು. ಅದೇ ರೀತಿ ಸಂಯುಕ್ತ ಸಹಕಾರಿ ನಿರ್ದೇಶಕರು ಬಸ್ಸಿನಲ್ಲಿ ಬಂದು ಕಾರಿನಲ್ಲಿ ಬಂದೆನೆಂದು ಭತ್ಯೆ ಪಡೆದರೆ, ಸಂಯುಕ್ತ ಸಹಕಾರಿ ನೌಕರರಿಗೆ ಈ ವಿಷಯ

ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Posted at GPO-MBC Bengaluru Post Office 560001,
Posting Day 8th. Registered No. RNP/BGW/1744/2014-16.
RNI No. KARBIL - 2004/18001. Pages 24



ತಿಳಿಯುವುದಿಲ್ಲವೇ. ಅದರಿಂದ ನಿರ್ದೇಶಕರ ಮೇಲೆ ನೌಕರರಿಗೆ ಅಭಿಮಾನ ಎಲ್ಲಿರುತ್ತದೆ. ಈ ವಿಷಯ ಸದಸ್ಯ ಸಹಕಾರಿಗಳಿಗೆ ತಿಳಿದರೆ ಅವರು ಆಯ್ಕೆ ಮಾಡಿದ ನಿರ್ದೇಶಕರು ಈ ರೀತಿ ಸ್ಥಾನ ದುರುಪಯೋಗದ ಬಗ್ಗೆ ತಿಳಿಯುವುದಿಲ್ಲವೇ?

ಈ ಮೇಲ್ಕಂಡ ಉದಾಹರಣೆಗಳನ್ನು ಕೊಟ್ಟ ಉದ್ದೇಶ, ಸೌಹಾರ್ದ ಕಾಯಿದೆ ರಚನೆ ಮಾಡಿದಾಗ, ಜವಾಬ್ದಾರಿಯುತ ನಿರ್ದೇಶಕರು ಆಯ್ಕೆಯಾಗಿ ಮಾದರಿ ಸಹಕಾರಿಗಳಾಗಿರುತ್ತಾರೆಂಬ ಭಾವನೆಯಿಂದ.

ಬಹಳಷ್ಟು ಸೌಹಾರ್ದ ಸಹಕಾರಿಗಳು ಆರ್ಥಿಕವಾಗಿ ಸಬಲವಾಗಿ ಮತ್ತು ಶಕ್ತಿಯುತವಾಗಿ ಕೆಲಸ ನಿರ್ವಹಿಸುತ್ತಿವೆ. ಈಗ ನೋಂದಣಿಯಾಗಿರುವ 3200 ಸಹಕಾರಿಗಳಲ್ಲಿ ಒಳ್ಳೆಯ ಸಹಕಾರಿಗಳ ಸಂಖ್ಯೆ ಹೆಚ್ಚಿದೆ. ಆದರೆ ಮೇಲ್ಕಂಡ ಉದಾಹರಣೆ ರೂಪಿಸಿಕೊಂಡಿರುವ ಸಹಕಾರಿಗಳು, ಸದಸ್ಯರ ಸಂಪನ್ಮೂಲವನ್ನು ಸಮರ್ಪಕವಾಗಿ ಉಪಯೋಗಿಸದಿದ್ದರೆ, ಆಂದೋಲನದ ಹೆಸರಿಗೆ ಧಕ್ಕೆಯಾಗುತ್ತದೆ ಎಂಬ ಅಂಶವನ್ನು ಸಂಯುಕ್ತ ಸಹಕಾರಿ ಮತ್ತು ನಿರ್ದೇಶಕರು ಮತ್ತು ಸದಸ್ಯ ಸಹಕಾರಿ ಮತ್ತು ಅದರ ನಿರ್ದೇಶಕರು ಗಮನಿಸಿದರೆ ಸೌಹಾರ್ದ ಕಾಯಿದೆ ಜಾರಿಗೆ ತಂದ ಉದ್ದೇಶ ಸಾರ್ಥಕವಾಗುತ್ತದೆ. 1959ರ ಕಾಯಿದೆಯಲ್ಲಿರುವ ಸಹಕಾರ ಸಂಘಗಳಲ್ಲಿ ಕನಿಷ್ಠ ಅರ್ಧದಷ್ಟು ಸಹಕಾರ ಸಂಘಗಳು ಸೌಹಾರ್ದ ಕಾಯಿದೆಗೆ ವರ್ಗಾವಣೆ ಹೊಂದಬಹುದೆಂದು ಬಹಳಷ್ಟು ಆಶಯಗಳಿದ್ದವು. ಏಕೆಂದರೆ ಸಹಕಾರಿ ಮುಖಂಡರು ಎಲ್ಲಾ ವೇದಿಕೆಗಳಲ್ಲಿ ನಿಬಂಧಕರ/ ಸರ್ಕಾರದ ನಿಯಂತ್ರಣದಿಂದ ಮುಕ್ತಿ ಕೇಳುತ್ತಿದ್ದರು, ಆದರೂ ಆ ಸಂಘಗಳು ಉದಾರೀಕೃತ ವಾತಾವರಣಕ್ಕೆ ಏಕೆ ವರ್ಗಾವಣೆ ಹೊಂದಲಿಲ್ಲ. ಅಂದರೆ ಸಹಕಾರಿಗಳು ವೇದಿಕೆಯಲ್ಲಿ ಮಾತ್ರ ನಿಯಂತ್ರಣದಿಂದ ಹೊರಗೆ ಬರಬಯಸಿದರೂ, ನಿಬಂಧಕರ/ ಸರ್ಕಾರದ ಪ್ರತ್ಯಕ್ಷ, ಪರೋಕ್ಷ ಅನುಕೂಲ ಪಡೆಯಲು ಹಳೇ ಕಾಯಿದೆಯಲ್ಲಿಯೇ ಉಳಿದರು. ಇದು ಸಹಕಾರಿ ಬೆಳವಣಿಗೆಗೆ ಬಹಳಷ್ಟು ಬೆಳವಣಿಗೆ ಕುಂಠಿತವಾಗಲು ಕಾರಣವಾಯಿತು.

ಸೌಹಾರ್ದ ಕಾಯಿದೆ ರಾಷ್ಟ್ರದಲ್ಲಿಯೇ ಪ್ರಥಮ ಬಾರಿಗೆ ಪ್ರಜಾಪ್ರಭುತ್ವದಡಿ ರಚನೆಯಾದ ಸಂಸ್ಥೆಗೆ ನಿಬಂಧಕರ ಅಧಿಕಾರ ಕೊಟ್ಟಿದೆ. ಇದನ್ನು ಮೂಲ ಉದ್ದೇಶಕ್ಕನುಗುಣವಾಗಿ ಜಾರಿಗೆ ತಂದರೆ, ರಾಷ್ಟ್ರಮಟ್ಟದಲ್ಲಿ ಕರ್ನಾಟಕ ರಾಜ್ಯಕ್ಕೆ ಹೆಸರು ಬರುತ್ತದೆ. ಈ ಉದ್ದೇಶದಿಂದ ಸಹಕಾರಿಗಳು ಮತ್ತು ಸಂಯುಕ್ತ ಸಹಕಾರಿ ಮತ್ತು ಅದರ ನಿರ್ದೇಶಕರು ಕಾರ್ಯಪ್ರವೃತ್ತರಾಗಬೇಕು. ಇದೇ ನನ್ನ ಆಶಯ. ■


## Form IV (See rule-8)

| | | | |
|---|---|---|---|
| 1. | Place of Publication | : | Bangalore |
| 2. | Periodicity of its Publications | : | Monthly |
| 3. | Printer's Name | : | Shakthi Printech |
| | Whether Citizen of India | : | Yes |
| | If foreigner, State the country of origin | | |
| | Address | : | 552/1, Rajajinagar, Bangaluru - 560021 |
| 4. | Editor's Name | : | Sharangouda G. Patil |
| | Whether Citizen of India | : | Yes |
| | If foreigner, State the country of origin | | |
| | Address | : | Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010 |
| 5. | Name and Address of individuals who own the Newspaper and partners or share holders holding more than percent of the total capital | : | Managing Director Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010 |

I, Sharangouda G. Patil here by declare that the particulars given above are true to the best of my knowledge and belief.

Date : 28-02-2015
Place : Bangalore

Sd/-
Signature of the Publisher / Editor


ಬೆಳಗಾವಿ ವಿಭಾಗೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ.
ದೂರವಾಣಿ : 0831–2401551

ಗುಲ್ಬರ್ಗಾ ವಿಭಾಗೀಯ ಕಛೇರಿಯ ವಿಳಾಸ : ಗುಲ್ಬರ್ಗಾ ನಂ 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ ಗಾರ್ಡನ್ ರಸ್ತೆ, ಗುಲ್ಬರ್ಗಾ – 585102. ದೂ. 08472–270222.

Edited, Printed and Published by Sharangouda G. Patil –Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010